


SARAYU - Kannada Monthly Regn. No. KARKAN/2014/62363
Sep Vol. : 10 Issue : 4 5124/ಶುಭಕೃತ್ ಸಂವತ್ಸರ ಸಪ್ಟೆಂಬರ್ 2023 ಪುಟ 8 Rs. 10/-

Postal Regn No. PTR/136/2022-24
Licensed to Post without pre-payment
License No: SK/WPP/PTR/117/2022-24

## 4 ವರ್ಷ ತುಂಬಿದ ಶಿಶುಮಂದಿರದ ಪುಟಾಣಿಗಳಿಗೆ ಹಮ್ಮಿಕೊಂಡ ವಿಶಿಷ್ಟ ಕಾರ್ಯಕ್ರಮ – ಅಕ್ಷರಾಭ್ಯಾಸ

03.08.2023ರಂದು ಶಿಶುಮಂದಿರದ ಮಕ್ಕಳ ಅಕ್ಷರಾಭ್ಯಾಸ ನಡೆಯಿತು. ಸರಸ್ವತಿ ಹೋಮದೊಂದಿಗೆ ಪ್ರಾರಂಭಗೊಂಡು, ಮಗುವನ್ನು ಪಾಲಕರ ಮಡಿಲಲ್ಲಿ ಕೂರಿಸಿ ಅಕ್ಷರಾಭ್ಯಾಸ ಮಾಡಿಸಲಾಯಿತು. ನಂತರ ನಡೆದ ಪಾಲಕರ ಸಭೆಯಲ್ಲಿ ಡಾ। ಪ್ರಭಾಕರ್ ಭಟ್ ಕಲ್ಲಡ್ಕ, ಶ್ರೀ ನಾರಾಯಣ ಸೋಮಯಾಜಿ, ಡಾ। ಕಮಲಾ ಪ್ರ.ಭಟ್ ಮತ್ತು ಆಡಳಿತ ಮಂಡಳಿ ಸದಸ್ಯರು ಹಾಗೂ 29 ದಂಪತಿಗಳು ಸಹಿತ 195 ಮಂದಿ ಉಪಸ್ಥಿತರಿದ್ದರು.


ಸರಸ್ವತಿ ಹೋಮ




ಪಾಲಕರ ಸಭೆ



**ಕರಾಟೆ ಸ್ಪರ್ಧೆ:** ವಿದ್ಯಾಭಾರತಿ ಪ್ರಾಂತಿಯ ಮಟ್ಟದ ಕರಾಟೆ ಸ್ಪರ್ಧೆಯಲ್ಲಿ ಶ್ರೀರಾಮ ಪ.ಪೂರ್ವ ಕಾಲೇಜು ದ್ವಿತೀಯ ವಿಜ್ಞಾನ ವಿಭಾಗದ ಅರುಣ್ ಮತ್ತು ಮನೀಶ್ ಇವರು ಚಿನ್ನದ ಪದಕದೊಂದಿಗೆ ಮಧ್ಯಪ್ರದೇಶದ ದೇವಸ್‌ನಲ್ಲಿ ನಡೆಯುವ ರಾಷ್ಟ್ರೀಯ ಮಟ್ಟದ ಕರಾಟೆ ಸ್ಪರ್ಧೆಗೆ ಆಯ್ಕೆಯಾಗಿರುತ್ತಾರೆ.

### ಅತಿಥಿಗಳ ಭೇಟಿ 11.8.2023




ಮೈಸೂರು ಮಾರ್ಕಟ್ರೈಲ್ ಕಂ.ಲಿ., ಬೆಂಗಳೂರು ಇದರ ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಡಾ। ಹೆಚ್ ಎಸ್ ಶೆಟ್ಟಿ, ವಿಸ್ತಾರ ಮೀಡಿಯ ಪ್ರೈ. ಲಿ. ಬೆಂಗಳೂರು ಇದರ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಪ್ರಧಾನ ಸಂಪಾದಕರಾದ ಶ್ರೀ ಹರಿಪ್ರಕಾಶ್ ಕೋಣೆಮಣೆ, ಯಕ್ಷಗಾನ ಕಲಾಸಂಘ ಉಡುಪಿ ಇದರ ಕಾರ್ಯದರ್ಶಿ ಶ್ರೀ ಮುರಳಿ ಕಡೆಕಾರ್, ಶ್ರೀ ಮನೋಹರ್ ಶೆಟ್ಟಿ ಸಾ.ಸಂಪರ್ಕ ಅಧಿಕಾರಿ ಅದಾನಿ ವಿಲ್ಮಾರ್ ಲಿಮಿಟೆಡ್ ಮಂಗಳೂರು ಅಧ್ಯಕ್ಷರು, ಇಂಟಕ್ ದಕ್ಷಿಣ ಕನ್ನಡ ಜಿಲ್ಲೆ, ಡಾ। ಪ್ರಭಾಕರ್ ಭಟ್ ಕಲ್ಲಡ್ಕ, ಶ್ರೀಮತಿ ಕಮಲಾ ಪ್ರ. ಭಟ್, ಶ್ರೀ ನಾರಾಯಣ ಸೋಮಯಾಜಿ, ಶ್ರೀ ವಸಂತ ಮಾಧವ, ಶ್ರೀ ರಮೇಶ್ ಎನ್ ಮೊದಲಾದವರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಶ್ರೀ ಡಾ ಹೆಚ್. ಎಸ್.ಶೆಟ್ಟಿ ಇವರನ್ನು ಅವರ ಸಾಧನೆಗಾಗಿ ವಿದ್ಯಾಕೇಂದ್ರದ ವತಿಯಿಂದ ಸನ್ಮಾನಿಸಿ, ಗೌರವಿಸಲಾಯಿತು.




ಪ್ರಾಥಮಿಕ ಶಾಲಾ ವತಿಯಿಂದ ವೇದವ್ಯಾಸ ಧ್ಯಾನಮಂದಿರದಲ್ಲಿ ದಾದಿಯರೊಂದಿಗೆ ರಕ್ಷಾಬಂಧನ ಕಾರ್ಯಕ್ರಮ ನಡೆಯಿತು. ಡಾ ಕಮಲಾ ಪ್ರ.ಭಟ್ ಶಾಲು ಹೊದಿಸಿ ಗೌರವಿಸಿದರು. ಸಹ ಸಂಚಾಲಕರು ಶ್ರೀ ರಮೇಶ್ ಎನ್, ಮುಖ್ಯೋಪಾಧ್ಯಾಯರು ಶ್ರೀ ರವಿರಾಜ್ ಕಣಂತೂರು ಉಪಸ್ಥಿತರಿದ್ದರು.



ರಕ್ಷಾ ಬಂಧನ 30-08-2023 ಶ್ರೀರಾಮ ಶಿಶುಮಂದಿರದ ಮಕ್ಕಳು ಸರಕಾರಿ ಕಛೇರಿ ಸಿಬ್ಬಂದಿಗಳಿಗೆ ಮತ್ತು ಸಾರ್ವಜನಿಕರಿಗೆ ರಕ್ಷೆ ಕಟ್ಟಿ ಶುಭಾಶಯ ಕೋರಿದರು.



ದಿನಾಂಕ 31-08-2023 ರಂದು ಅಕ್ಕಮಹಾದೇವಿ ಶಿಶುಮಂದಿರದ ಮಕ್ಕಳು ಬಿ.ಸಿ.ರೋಡ್ ನ ಸರಕಾರಿ ಕಛೇರಿಗಳಿಗೆ ಭೇಟಿ ನೀಡಿ ಸಿಬ್ಬಂದಿಗಳಿಗೆ ರಕ್ಷಾಬಂಧನ ಕಟ್ಟಿದರು.



ಹುಟ್ಟುಹಬ್ಬ ಮತ್ತು ರಕ್ಷಾಬಂಧನ 30.08.2023 ಜುಲೈ ಮತ್ತು ಆಗಸ್ಟ್ ತಿಂಗಳಲ್ಲಿ ಹುಟ್ಟಿದ ಮಕ್ಕಳ ಸಾಮೂಹಿಕ ಹುಟ್ಟುಹಬ್ಬ ಮತ್ತು ರಕ್ಷಾಬಂಧನ ಕಾರ್ಯಕ್ರಮದಲ್ಲಿ ಶ್ರೀ ಯತಿರಾಜ್ ಭಾಗವಹಿಸಿ ಶುಭಾಶಯ ಕೋರಿದರು.

## ಪ್ರಾಥಮಿಕ ಶಾಲೆ



ನೇಜಿ ನೆಡುವ ಕಾರ್ಯಕ್ರಮ : 10.8.2023

ಸುದೆಕ್ಕಾರ್‌ನಲ್ಲಿ ಪ್ರಾಥಮಿಕ ವಿಭಾಗದ ವಿದ್ಯಾರ್ಥಿಗಳಿಗೆ ನೇಜಿ ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕೃಷಿ ಸಂಘದ ವಿದ್ಯಾರ್ಥಿಗಳು ಹಾಗೂ ಆಸಕ್ತ ವಿದ್ಯಾರ್ಥಿಗಳು ಈ ಕೃಷಿ ಕಾರ್ಯದಲ್ಲಿ ಭಾಗಿಯಾದರು.



ಸ್ವಾತಂತ್ರ್ಯ ದಿನಾಚರಣೆ : 15.8.2023

ಎಸ್.ಬಿ.ಐ ಜೆ.ವಿಮಾ ನಿಗಮದ ಹಿರಿಯ ಶಾಖಾ ವ್ಯವಸ್ಥಾಪಕರು ಸುಪ್ರೀತಾ ಎಂ. ಎಸ್.ಬಿ.ಐನ ಡೆವಲಪ್‌ಮೆಂಟ್ ಮ್ಯಾನೇಜರ್ ಪೂಜಾ ವಿಕೇಶ್ ಕುಮಾರ್, ಡಾ। ಕಮಲಾ ಪ್ರಭಾಕರ್ ಭಟ್, ಮಾತೃಭಾರತಿ ಸಮಿತಿಯ ಸದಸ್ಯರು ಉಪಸ್ಥಿತರಿದ್ದರು.



ಭಜನೆ-ಹುಟ್ಟುಹಬ್ಬ - ಬಾಳ್ತಿಲ ಗ್ರಾ.ಪಂ.ನ ಉಪಾಧ್ಯಕ್ಷರು ಹಾಗೂ ಮಾತೃಭಾರತಿಯ ಉಪಾಧ್ಯಕ್ಷರಾದ ಶ್ರೀಮತಿ ರಂಜಿನಿ, ವಿ.ಪ.ಗ್ರಾ. ಪಂ. ಉಪಾಧ್ಯಕ್ಷರು ಶ್ರೀಮತಿ ರೋಹಿಣಿ ರಾಜೇಶ್, ಹಿ.ವಿಭಾಗದ ಮಾತೃಭಾರತಿಯ ಅಧ್ಯಕ್ಷರಾದ ಶ್ರೀಮತಿ ಲತಾ, ಶ್ರೀಮತಿ ಸವಿತಾ, ಕಾರ್ಯದರ್ಶಿ ಶ್ರೀಮತಿ ಸುಚಿತ್ರ, ಶ್ರೀಮತಿ ರೇಖಾ ಉಪಸ್ಥಿತರಿದ್ದರು.



**ಜಿಲ್ಲಾ ಮಟ್ಟದಲ್ಲಿ ಪ್ರಶಸ್ತಿ**

ದಕ್ಷಿಣ ಕನ್ನಡ ಜಿಲ್ಲಾ ಗಣಿತ ವಿಜ್ಞಾನ ಮೇಳ ಮತ್ತು ಸಂಸ್ಕೃತಿ ಮಹೋತ್ಸವದಲ್ಲಿ ಪ್ರಾಥಮಿಕ ಶಾಲೆ ವಿದ್ಯಾರ್ಥಿಗಳು ಶಿಶು ವರ್ಗ, ಬಾಲ ವರ್ಗಗಳಲ್ಲಿ ಒಟ್ಟು 9 ಪ್ರಥಮ, 4 ದ್ವಿತೀಯ, 6 ತೃತೀಯ ಬಹುಮಾನಗಳನ್ನು ಪಡೆದುಕೊಂಡಿದೆ.



**ಪೋಷಕರ ಸಭೆ : 31.8.2023**

ಪ್ರೂ.ಪ್ರಾಥಮಿಕ ಹಾಗೂ ಹಿರಿಯ ವಿಭಾಗಗಳಾಗಿ 2 ಹಂತಗಳಲ್ಲಿ ನಡೆಯಿತು. ಡಾ। ಪ್ರಭಾಕರ್ ಭಟ್ ಮಾರ್ಗದರ್ಶನ ಮಾಡಿದರು. ವಿದ್ಯಾಕೇಂದ್ರದ ಅಧ್ಯಕ್ಷರು, ಸಂಚಾಲಕರು, ಮುಖ್ಯೋಪಾಧ್ಯಾಯರು ಉಪಸ್ಥಿತರಿದ್ದರು.





**ತಾಲೂಕು ಮಟ್ಟಕ್ಕೆ ಆಯ್ಕೆ : 30.8.2023**

ಸಾರ್ವಜನಿಕ ಶಿಕ್ಷಣ ಇಲಾಖೆ ಇವರು ಆಯೋಜಿಸಿದ ಪ್ರಾಥಮಿಕ ವಿದ್ಯಾರ್ಥಿಗಳ ವಲಯ ಮಟ್ಟದ ಕಬಡ್ಡಿ ಪಂದ್ಯಾಟದಲ್ಲಿ ಪ್ರಾಥಮಿಕ ವಿಭಾಗದ ಬಾಲಕ ಹಾಗೂ ಬಾಲಕಿಯರ ತಂಡ ಪ್ರಥಮ ಸ್ಥಾನ ಪಡೆದು ತಾಲೂಕು ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

## ಸೆಕೆಂಡರಿ ಸ್ಕೂಲ್



ಪ್ರತಿಜ್ಞಾವಿಧಿ 4.08.2023

2023-24ನೇ ಸಾಲಿನ ಶಾಲಾ ಮಂತ್ರಿಮಂಡಲದ ಪ್ರತಿಜ್ಞಾವಿಧಿ ಕಾರ್ಯಕ್ರಮವನ್ನು ವಿದ್ಯಾಕೇಂದ್ರದ ಖಜಾಂಚಿಯಾದ ಶ್ರೀ ಸತೀಶ್ ಶಿವಗಿರಿ ದೀಪ ಬೆಳಗಿಸುವುದರ ಮೂಲಕ ಪ್ರಾರಂಭಿಸಿದರು. ಕಾರ್ಯಕ್ರಮದಲ್ಲಿ ಉಪಪ್ರಾಂಶುಪಾಲರಾದ ಶ್ರೀ ತಿರುಮಲೇಶ್ವರ ಪ್ರಶಾಂತ್, ಅಧ್ಯಾಪಕರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.



ಪೋಷಕರ ಸಭೆ 22.08.2023

2023-24ನೇ ಸಾಲಿನ ಪೋಷಕರ ಸಭೆಯಲ್ಲಿ ಡಾ। ಪ್ರಭಾಕರ್ ಭಟ್ ಕಲ್ಲಡ್ಕ ಮಾರ್ಗದರ್ಶನ ಮಾಡಿದರು. ಶ್ರೀ ನಾರಾಯಣ ಸೋಮಯಾಜಿ, ಶ್ರೀ ವಸಂತ ಮಾಧವ ಶ್ರೀಮಾನ್ ಹಾಗೂ ಉಪಪ್ರಾಂಶುಪಾಲರಾದ ಶ್ರೀ ತಿರುಮಲೇಶ್ವರ ಪ್ರಶಾಂತ್ ಶ್ರೀಮಾನ್ ಇವರು ಉಪಸ್ಥಿತರಿದ್ದರು.



**ಕರಾಟೆಯಲ್ಲಿ ಸಮಗ್ರ-ರಾಷ್ಟ್ರ ಮಟ್ಟಕ್ಕೆ ಆಯ್ಕೆ 29.8.23**

ಶ್ರೀದೇವಿ ಪುಣಚದಲ್ಲಿ ನಡೆದ ವಿದ್ಯಾಭಾರತಿ ರಾಜ್ಯಮಟ್ಟದ ಕರಾಟೆಯಲ್ಲಿ ಸೆಕೆಂಡರಿ ಸ್ಕೂಲ್‌ನ ಶ್ರವಣ್(ದ್ವಿತೀಯ), ರಕ್ಷಿತ್ (ಪ್ರಥಮ), ಯಶಸ್(ದ್ವಿತೀಯ), ವಿಖ್ಯಾತ್(ದ್ವಿತೀಯ) ಸ್ಥಾನ ಪಡೆದಿರುತ್ತಾರೆ. ರಕ್ಷಿತ್ ಪ್ರಥಮ ಸ್ಥಾನ ಪಡೆದು ಮಧ್ಯಪ್ರದೇಶದ ದೇವಾಸ್‌ನಲ್ಲಿ ನಡೆಯಲಿರುವ ರಾಷ್ಟ್ರ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿರುತ್ತಾರೆ.

# ಸುಭಾಷಿತ ಮಂಜರಿ

**ಮಧು ಪಶ್ಯತಿ ಮೂಢಾತ್ಮಾ**
**ಪ್ರಪಾತಂ ನೈವ ಪಶ್ಯತಿ ।**
**ಕರೋತಿ ನಿಂದಿತಂ ಕರ್ಮ**
**ನರಕಾನ್ನ ಬಿಭೇತಿ ಚ ॥**

ಜೇನುತುಪ್ಪ ಸಿಗುತ್ತದೆಂದು ಉತ್ಸಾಹದಿಂದಿರುವ ಮೂರ್ಖನು, ಕಣಿವೆಯಲ್ಲಿ ಬಿದ್ದು ಸಾಯುವೆನೆಂದು ತಿಳಿಯಲಾರ. ನಿಂದಿತವಾದ ಕೆಲಸವನ್ನು ಮಾಡುವವನು ನರಕಕ್ಕಾಗಿ ಹೆದರುವುದಿಲ್ಲ

## ಸಂಪಾದಕೀಯ

**ಆತ್ಮೀಯ ಓದುಗರೇ,**

**ಮುಂದಿನ ಶೈಕ್ಷಣಿಕ ವರ್ಷದಲ್ಲಿ ಒಂದನೇ ತರಗತಿಗೆ ಸೇರ್ಪಡೆಯಾಗುವ ಪುಟಾಣಿಗಳಿಗೆ ಸಾಮೂಹಿಕ ಅಕ್ಷರಾಭ್ಯಾಸ, ವಿದ್ಯಾ-ಕೇಂದ್ರದ ಎಲ್ಲರೂ ಸೇರಿಕೊಂಡು ಆಚರಿಸುವ ಸ್ವಾತಂತ್ರ್ಯ ದಿನಾಚರಣೆ ಹಾಗೂ ಎಲ್ಲಾ ವಿಭಾಗಗಳಲ್ಲೂ ಪ್ರತಿಭಾ ಕಾರಂಜಿ, ಇಲಾಖಾ ವತಿಯಿಂದ ನಡೆಯುವ ಕ್ರೀಡಾಕೂಟ, ವಿದ್ಯಾಭಾರತಿ ಕ್ರೀಡಾಕೂಟಗಳು, ಜ್ಞಾನ ವಿಜ್ಞಾನ ಮೇಳಗಳಲ್ಲಿ ಭಾಗವಹಿಸಿ ಪ್ರಶಸ್ತಿ ಪಡೆದ ವಿವರ, ಭಾರತ ದರ್ಶನ ಪ್ರವಾಸದ, ಸಂಸ್ಥೆಗೆ ಭೇಟಿ ನೀಡಿದ ಅತಿಥಿಗಳ ಮತ್ತು ಇನ್ನಿತರ ಶೈಕ್ಷಣಿಕ ವರದಿಗಳೊಂದಿಗೆ ಸರಯೂ ಪ್ರಕಟಗೊಳ್ಳುತ್ತಿದೆ.**

ವಂದನೆಗಳೊಂದಿಗೆ

ಸಂಪಾದಕ ಬಳಗ

## ಸಂಪಾದಕೀಯ ಮಂಡಳಿ

**ಸಂಪಾದಕರು, ಮುದ್ರಕರು ಹಾಗೂ ಪ್ರಕಾಶಕರು :**
ನಾರಾಯಣ ಸೋಮಯಾಜಿ
ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರ
**ಕಾರ್ಯನಿರ್ವಾಹಕ ಸಂಪಾದಕರು :**
ಕೃಷ್ಣಪ್ರಸಾದ ಕಾಯರ್‌ಕಟ್ಟೆ
**ಸಹಸಂಪಾದಕರು :**
ಪ್ರೀತಿಕಾ (ಶಿಶುಮಂದಿರ)
ಚೈತ್ರ (ಪ್ರಾಥಮಿಕ ಶಾಲೆ)
ರಾಜೇಶ್ವರಿ (ಪ್ರೌಢಶಾಲೆ)
ರಮ್ಯ (ಸೆಕೆಂಡರಿ ಸ್ಕೂಲ್)
ರಮೇಶ್ (ಪಿಯುಸಿ)
ಪ್ರಸನ್ನಾ (ಪದವಿ)
**ವ್ಯವಸ್ಥಾಪಕ ಸಂಪಾದಕರು :** ಕುಶಾಲಪ್ಪ ಅಮ್ಟೂರು

**ವರಮಹಾಲಕ್ಷ್ಮೀ ಪೂಜೆ– ರಕ್ಷಾಬಂಧನ 25.8.23** ಶ್ರೀರಾಮ ಶಿಶುಮಂದಿರ ಕಲ್ಲಡ್ಕ ಇದರ ವತಿಯಿಂದ ಸುದೆಕ್ಕಾರು ಶ್ರೀ ರಕ್ತೇಶ್ವರಿ ದೈವಸ್ಥಾನದ ವಠಾರದಲ್ಲಿ ಸಾಮೂಹಿಕ ಶ್ರೀ ವರಮಹಾಲಕ್ಷ್ಮೀ ಪೂಜೆ ಹಾಗೂ ರಕ್ಷಾಬಂಧನ ಕಾರ್ಯಕ್ರಮ ನಡೆಯಿತು. ಡಾ । ಪ್ರಭಾಕರ್ ಭಟ್ ಕಲ್ಲಡ್ಕ, ರಕ್ತೇಶ್ವರಿ ದೈವಸ್ಥಾನದ ಉಪಾಧ್ಯಕ್ಷರಾದ ಶ್ರೀ ದಿವಾಕರ ಶೆಟ್ಟಿ ಉಪಸ್ಥಿತರಿದ್ದರು. 37 ಮಾತೆಯರು ವ್ರತಧಾರಿಗಳಾಗಿ ಒಟ್ಟು 275ಕ್ಕೂ ಹೆಚ್ಚು ಜನ ಭಾಗವಹಿಸಿದ್ದರು.

**ವಿವಿಧ ಶಿಶುಮಂದಿರಗಳಲ್ಲಿ ಆಡಳಿತ ಮಂಡಳಿಯ ಬೈಠಕ್ ಆಗೋಸ್ಟ್ 8, 14, ಮತ್ತು 22**

ಶ್ರೀಕೃಷ್ಣ ಶಿಶುಮಂದಿರ ಸಜೀಪ ಕಂದೂರು, ಸರಸ್ವತಿ ಶಿಶುಮಂದಿರ ಕೊಪ್ಪಲಕೋಡಿ, ಅಕ್ಕಮಹಾದೇವಿ ಶಿಶುಮಂದಿರ ಅಜ್ಜಿಬೆಟ್ಟು, ಶ್ರೀಗಣೇಶ ಶಿಶುಮಂದಿರ ಬಿ.ಸಿ.ರೋಡ್‌ಗಳಲ್ಲಿ ಆಡಳಿತ ಮಂಡಳಿಯ ಬೈಠಕ್ ನಡೆಯಿತು. ಡಾ। ಪ್ರಭಾಕರ ಭಟ್ ಕಲ್ಲಡ್ಕ ಮಾರ್ಗದರ್ಶನ ಮಾಡಿದರು. ಶ್ರೀಮತಿ ಕಮಲ ಪ್ರಭಾಕರ ಭಟ್, ಶ್ರೀ ವಸಂತ ಮಾಧವ ಮತ್ತು ಆಡಳಿತ ಮಂಡಳಿ ಸದಸ್ಯರು ಉಪಸ್ಥಿತರಿದ್ದರು.

**ವರಮಹಾಲಕ್ಷ್ಮೀ ಪೂಜೆ–ರಕ್ಷಾಬಂಧನ 25.08.23**

ಸರಸ್ವತಿ ಶಿಶುಮಂದಿರ ಕೊಪ್ಪಲಕೋಡಿ ಇದರ ವತಿಯಿಂದ ಶ್ರೀ ರಾಮಾಂಜನೇಯ ವ್ಯಾಯಾಮ ಶಾಲೆ ಶಂಭೂರು ಇಲ್ಲಿ ಸಾಮೂಹಿಕ ಶ್ರೀ ವರಮಹಾಲಕ್ಷ್ಮೀ ಪೂಜೆ ಮತ್ತು ರಕ್ಷಾ ಬಂಧನ ಕಾರ್ಯಕ್ರಮ ನಡೆಯಿತು. ಪದವಿ ಕಾಲೇಜಿನ ಉಪನ್ಯಾಸಕಿ ಶ್ರೀಮತಿ ಜಯಲಕ್ಷ್ಮೀ ಕಾರ್ಯಕ್ರಮದ ಮಹತ್ವವನ್ನು ತಿಳಿಸಿದರು. 33 ಮಾತೆಯರು ವ್ರತಧಾರಿಗಳಾಗಿ ಒಟ್ಟು 220ಕ್ಕೂ ಹೆಚ್ಚು ಜನ ಭಾಗವಹಿಸಿದ್ದರು.

**ರಕ್ಷಾಬಂಧನ 30.8.2023:**

ಶ್ರೀ ಗಣೇಶ ಶಿಶುಮಂದಿರದ ರಕ್ಷಾ ಬಂದಧನದಲ್ಲಿ ರೇಖಾ ಮಾತಾಜಿ ಇವರು ರಕ್ಷಾಬಂಧನದ ಮಹತ್ವವನ್ನು ತಿಳಿಸಿಕೊಟ್ಟರು.

ಸರಸ್ವತಿ ಶಿಶುಮಂದಿರ ಕೊಪ್ಪಲಕೋಡಿಯಲ್ಲಿ ಶ್ರೀ ಗಣೇಶ್ ಹೆಚ್ ಆರ್, ನರಿಕೊಂಬು ಗ್ರಾಮ ಪಂಚಾಯತ್, ರೈತರ ಸೇವಾ ಸಹಕಾರಿ ಬ್ಯಾಂಕ್ , ಹಾಗು ಕೆನಾರ ಬ್ಯಾಂಕ್ ನರಿಕೊಂಬು ಇಲ್ಲಿಗೆ ಹೋಗಿ ರಕ್ಷೆ ಕಟ್ಟಿ ಶುಭಾಶಯ ತಿಳಿಸಿದರು.

**ಪಾಲಕರ ಸಭೆ 01.09.2023**

ಅಕ್ಕಮಹಾದೇವಿ ಶಿಶುಮಂದಿರ ಇಲ್ಲಿ ರಕ್ಷಾಬಂಧನ ಮತ್ತು ಪಾಲಕರ ಸಭೆ ನಡೆಯಿತು. ಶ್ರೀಮತಿ ಕಮಲ ಪ್ರ. ಭಟ್ ಮಾರ್ಗದರ್ಶನ ಮಾಡಿದರು.

## ಪ್ರಾಥಮಿಕ ಶಾಲೆ

**ಶಾಲಾ ಮಟ್ಟದ ಪ್ರತಿಭಾ ಕಾರಂಜಿ 4.8.2023**

ವಲಯ ಮಟ್ಟದ ಪ್ರತಿಭಾ ಕಾರಂಜಿಗೆ ಆಯ್ಕೆ ಮಾಡುವ ಸಲುವಾಗಿ ಶಾಲಾ ಮಟ್ಟದಲ್ಲಿ ಚಿತ್ರಕಲೆ, ಮಣ್ಣಿನ ಮಾದರಿ, ಕಂಠಪಾಠ, ಆಶುಭಾಷಣ, ಲಘುಸಂಗೀತ ಇತ್ಯಾದಿ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು.

**ವರ್ತುಲ ಕಾರ್ಯಾಗಾರದಲ್ಲಿ ಭಾಗಿ : 5.8.2023**

ಶ್ರೀದೇವಿ ವಿದ್ಯಾಕೇಂದ್ರ ಮಣಚ ಇಲ್ಲಿ ನಡೆದ ಶ್ರೀರಾಮ ವರ್ತುಲ ಶೈಕ್ಷಣಿಕ ಕಾರ್ಯಾಗಾರದಲ್ಲಿ ಪ್ರಾಥಮಿಕ ವಿಭಾಗದ ಅಧ್ಯಾಪಕರು ಭಾಗವಹಿಸಿದರು.

**ರಾಜ್ಯ ಮಟ್ಟಕ್ಕೆ ಆಯ್ಕೆ : 8.8.2023**

ದ.ಕ ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆ ಇವರು ಆಯೋಜಿಸಿದ ಪ್ರಾಥಮಿಕ ವಿದ್ಯಾರ್ಥಿಗಳ ಜಿಲ್ಲಾ ಮಟ್ಟದ ಆಟೋಟ ಸ್ಪರ್ಧೆಯಲ್ಲಿ 7ನೇ ತರಗತಿಯ ಗುರುನಂದನ್ ರೈ ಜಂಪ್ ರೋಪ್ ನಲ್ಲಿ ಪ್ರಥಮ ಸ್ಥಾನ ಪಡೆದು ಬೆಂಗಳೂರಿನಲ್ಲಿ ನಡೆಯುವ ರಾಜ್ಯಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿ ಜಿಲ್ಲೆಯನ್ನು ಪ್ರತಿನಿಧಿಸಲಿದ್ದಾರೆ.

**ಕಥಾಕಥನ : 12.8.2023**

ಮುಖ್ಯೋಪಾಧ್ಯಾಯರು ಶ್ರೀ ರವಿರಾಜ್ ಕಣಂತೂರು ವಿದ್ಯಾರ್ಥಿಗಳಿಗೆ ರಾಮಾಯಣದ ಕಥೆ ಹೇಳಿ ಕೊನೆಯಲ್ಲಿ ಪ್ರಶ್ನೆಯನ್ನು ಕೇಳಲಾಯಿತು. ಸರಿ ಉತ್ತರ ನೀಡಿದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

**ನಾಗರ ಪಂಚಮಿ : 22.8.2023**

ವಿದ್ಯಾಕೇಂದ್ರದಲ್ಲಿರುವ ನಾಗನ ಕಟ್ಟೆಗೆ ಹಾಲಿನ ಅಭಿಷೇಕ ಹಾಗೂ ಪೂಜೆ ನಡೆಯಿತು. ಸಂಸ್ಥೆಯ ಹಿರಿಯರು, ವಿಭಾಗ ಮುಖ್ಯಸ್ಥರು ಹಾಗೂ ಅಧ್ಯಾಪಕ ವೃಂದದವರು ಉಪಸ್ಥಿತರಿದ್ದರು.

**ಚಂದ್ರಯಾನ – 3 ರ ಮಾಹಿತಿ : 23.8.2023**

ಮಹೇಂದ್ರ ಸಭಾಭವನದಲ್ಲಿ ವಿಕ್ರಮ್ ಲ್ಯಾಂಡರ್ ಚಂದ್ರಯಾನ – 3 ರ ಬಗ್ಗೆ ಮಾಹಿತಿಯನ್ನು ಅಧ್ಯಾಪಕರಾದ ಶ್ರೀ ಬಾಲಕೃಷ್ಣ ಇವರು ವಿದ್ಯಾರ್ಥಿಗಳಿಗೆ ನೀಡಿದರು.

**ಜಿಲ್ಲಾ ಮಟ್ಟದ ಜ್ಞಾನ ವಿಜ್ಞಾನ ಮೇಳ : 26.8.2023**

ವಿದ್ಯಾಭಾರತಿ ಕರ್ನಾಟಕ, ಪುತ್ತೂರು ವಿವೇಕಾನಂದ ಕನ್ನಡ ಮಾಧ್ಯಮ ಶಾಲೆ ಇದರ ಸಹಯೋಗದಲ್ಲಿ ನಡೆದ ಜಿಲ್ಲಾಮಟ್ಟದ ಗಣಿತ – ವಿಜ್ಞಾನ ಹಾಗೂ ಸಂಸ್ಕೃತಿ ಜ್ಞಾನ ಪರಿಚಯ ಸ್ಪರ್ಧೆಯಲ್ಲಿ ಕಲ್ಲಡ್ಕ ಶ್ರೀರಾಮ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿದ್ದು, ಬಾಲವರ್ಗದ ಗಣಿತ ಮಾದರಿ ಪ್ರದರ್ಶನದಲ್ಲಿ ಸಮ ಬಹುಭುಜಾಕೃತಿಗಳ ಗುಣಧರ್ಮಗಳ ಮೇಲೆ ಆಧಾರಿತ ಪ್ರದರ್ಶನ ಎಂಬ ವಿಷಯದಲ್ಲಿ 6ನೇ ತರಗತಿಯ ಭೂಮಿಕಾ ಪ್ರಥಮ ಸ್ಥಾನ, ಕ್ಷೇತ್ರಫಲ ಹಾಗೂ ಆಯತದ ಮಿತಿಯನ್ನು ಸ್ಪಷ್ಟಗೊಳಿಸುವ ಪ್ರದರ್ಶನ ಎಂಬ ವಿಷಯದಲ್ಲಿ 6ನೇ ತರಗತಿಯ ರಾಜೇಶ್ವರಿ ಭಟ್ ಪ್ರಥಮ ಸ್ಥಾನ, ಸಂಶೋಧನಾರ್ಹ ಪ್ರದರ್ಶನದಲ್ಲಿ 6ನೇ ತರಗತಿಯ ಪಿ. ಸುಶ್ಮಿತಾ ಭಟ್ ಪ್ರಥಮ ಸ್ಥಾನ, ಸಂಸ್ಕೃತಿ ಜ್ಞಾನ ರಸಪ್ರಶ್ನೆಯಲ್ಲಿ 7ನೇ ತರಗತಿಯ ಪ್ರಜ್ಞಾ, ಸಾನ್ವಿ ಕಾಮತ್, ವೈಷ್ಣವಿ ಕಡ್ಯ ಪ್ರಥಮ ಸ್ಥಾನ, ವಿಜ್ಞಾನ ಮಾದರಿ ಪ್ರದರ್ಶನದಲ್ಲಿ ವಾಯು ಒತ್ತಡ ಆಧಾರಿತ ಪ್ರತಿರೂಪ ಎಂಬ ವಿಷಯದಲ್ಲಿ 7ನೇ ತರಗತಿಯ ಶ್ರೇಯಾ ಎಂ.ಜೆ ಪ್ರಥಮ ಸ್ಥಾನ, ಮಳೆ ನೀರು ಸಂರಕ್ಷಿತ ಆಧಾರಿತ ಪ್ರತಿರೂಪ ಎಂಬ ವಿಷಯದಲ್ಲಿ 7ನೇ ತರಗತಿಯ ಅಮೂಲ್ಯ ಡಿ ಎಸ್ ಮತ್ತು 6ನೇ

ತರಗತಿಯ ಶ್ರೀನಿಧಿ ಪ್ರಥಮ ಸ್ಥಾನ ಪಡೆದು, ಕಲ್ಬುರ್ಗಿಯಲ್ಲಿ ನಡೆಯುವ ಪ್ರಾಂತಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ. ಗಣಿತ ಲೇಖನ ಹಾಗೂ ವಾಚನದಲ್ಲಿ 7ನೇ ತರಗತಿ ವೈಷ್ಣವಿ ಕಡ್ಯ ದ್ವಿತೀಯ ಸ್ಥಾನ, ಕಥಾಕಥನದಲ್ಲಿ 7ನೇ ತರಗತಿಯ ವೈಷ್ಣವಿ ಕಾಮತ್ ದ್ವಿತೀಯ ಸ್ಥಾನ ಪಡೆದುಕೊಂಡಿದ್ದಾರೆ.

ಶಿಶುವರ್ಗದ ವಿಜ್ಞಾನ ಮಾದರಿ ಪ್ರದರ್ಶನದಲ್ಲಿ ನೈಸರ್ಗಿಕ ವಿಕೋಪಗಳ ಆಧಾರಿತ ಮಾದರಿ ಎಂಬ ವಿಷಯದಲ್ಲಿ 4ನೇ ತರಗತಿಯ ಮನ್ವಿತ್ ಪ್ರಥಮ ಸ್ಥಾನ, ಸಾರಿಗೆ ಸಂಪರ್ಕ ಎಂಬ ವಿಷಯದಲ್ಲಿ 5ನೇ ತರಗತಿಯ ಸಮರ್ಥ ಪ್ರಥಮ ಸ್ಥಾನ, ಪರ್ಯಾವರಣ ಸ್ವಚ್ಛತೆ ಆಧಾರಿತ ಪ್ರತಿರೂಪ ಎಂಬ ವಿಷಯದಲ್ಲಿ 4ನೇ ತರಗತಿಯ ಪ್ರದ್ಯೋತ್ ದ್ವಿತೀಯ ಸ್ಥಾನ, ಸೃಜನಾತ್ಮಕ ಪ್ರತಿರೂಪ – ಬಹುಪಯೋಗಿ ಗಾಲಿಕುರ್ಚಿ ಎಂಬ ವಿಷಯದಲ್ಲಿ 5ನೇ ತರಗತಿಯ ಸಮೃದ್ಧ್ ತೃತೀಯ ಸ್ಥಾನ, ಗಣಿತ ಮಾದರಿ ಪ್ರದರ್ಶನದಲ್ಲಿ ಸಂಶೋಧನಾರ್ಹ ಪ್ರದರ್ಶನ ಎಂಬ ವಿಷಯದಲ್ಲಿ 4ನೇ ತರಗತಿಯ ಸ್ಪಂದತೇಜ ದ್ವಿತೀಯ ಸ್ಥಾನ, ಆಧಾರಭೂತ ಸಂಕ್ರಿಯೆಯಲ್ಲಿ 5ನೇ ತರಗತಿಯ ತನ್ಮಯಿ ರೈ ತೃತೀಯ ಸ್ಥಾನ, ವೇದಗಣಿತ ರಸಪ್ರಶ್ನೆಯಲ್ಲಿ 5ನೇ ತರಗತಿಯ ಅಪ್ರಮೇಯ, ಸ್ವಸ್ತಿಕ್ ಎಸ್, ರಾಮ್ ಸ್ವರೂಪ್ ಪ್ರಥಮ ಸ್ಥಾನ, ಸಂಸ್ಕೃತಿ ಜ್ಞಾನ ರಸಪ್ರಶ್ನೆಯಲ್ಲಿ 5ನೇ ತರಗತಿಯ ಅನಿರುದ್ಧ್, ಧನ್ಯ, ಪ್ರಾಪ್ತಿ ತೃತೀಯ ಸ್ಥಾನ, ಕಥಾಕಥನದಲ್ಲಿ 4ನೇ ತರಗತಿಯ ಅನ್ವೇಷ್ ಪ್ರಭು ತೃತೀಯ ಸ್ಥಾನ ಹಾಗೂ ವಿಜ್ಞಾನ ಪ್ರಯೋಗದಲ್ಲಿ 4ನೇ ತರಗತಿಯ ಶ್ರೀರಾಮ ತೃತೀಯ ಸ್ಥಾನ ಪಡೆದುಕೊಂಡಿದ್ದಾನೆ.

**ಸಂಸ್ಕೃತಿ ಮಹೋತ್ಸವ** – ಜಾನಪದ ನೃತ್ಯ ಸ್ಪರ್ಧೆಯಲ್ಲಿ ದೀಪಶ್ರೀ, ಶರಣ್ಯ, ನಿಶಾ, ಕೃಪಾ, ಗಾನವಿ, ರಕ್ಷಾ, ಧಾತ್ರಿ, ಜಾಹ್ನವಿ ಎಸ್ ಪಿ ತೃತೀಯ ಸ್ಥಾನ ಪಡೆದುಕೊಂಡರು. ಇವರಿಗೆ ಹಾಡಿನಲ್ಲಿ ಧಾತ್ರಿ, ಭುವಿ, ದಿಶಾ, ಚಿಂತನಾ ಹಾಗೂ ತಾಸೆಯಲ್ಲಿ ಮುರಳೀಧರ ಹಾಗೂ ದೀಕ್ಷಿತ್ ಸಹಕರಿಸಿದರು.

ಜಿಲ್ಲಾ ಮಟ್ಟದ ಜ್ಞಾನ ವಿಜ್ಞಾನ ಮೇಳದಲ್ಲಿ ಪ್ರಾಥಮಿಕ ವಿಭಾಗವು 9 ಪ್ರಥಮ ಸ್ಥಾನ, 4 ದ್ವಿತೀಯ ಸ್ಥಾನ ಹಾಗೂ 6 ತೃತೀಯ ಸ್ಥಾನ ಪಡೆದು ಒಟ್ಟು 19 ಬಹುಮಾನವನ್ನು ತನ್ನದಾಗಿಸಿಕೊಂಡಿದೆ.

**ರಾಷ್ಟ್ರೀಯ ಕ್ರೀಡಾ ದಿನಾಚರಣೆ : 29.8.2023**

ರಾಷ್ಟ್ರೀಯ ಕ್ರೀಡಾ ದಿನಾಚರಣೆ ನಿಮಿತ್ತ ಸ್ವದೇಶಿ ಆಟಗಳನ್ನು ತರಗತಿವಾರು ಆಡಿಸಲಾಯಿತು. ದೈ. ಶಿಕ್ಷಣ ಶಿಕ್ಷಕರಾದ ಶ್ರೀ ಜಯಂತ್ ಆಳ್ವ ಉಪಸ್ಥಿತರಿದ್ದರು.

**ಸಂಸ್ಕೃತ ಸಪ್ತಾಹಕ್ಕೆ ಚಾಲನೆ : 29.8.2023**

ಸಂಸ್ಕೃತ ಸಪ್ತಾಹಕ್ಕೆ ಚಾಲನೆ ನೀಡಿ, ಇದರ ಅಂಗವಾಗಿ ವಿದ್ಯಾರ್ಥಿಗಳಿಂದ ನೃತ್ಯ ಹಾಗೂ ನಾಟಕ ಪ್ರದರ್ಶನ ನಡೆಯಿತು.

**ತಾಲೂಕು ಮಟ್ಟಕ್ಕೆ ಆಯ್ಕೆ : 31.8.2023**

ವಲಯ ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ಹಿರಿಯ ವಿಭಾಗದಲ್ಲಿ 10 ಪ್ರಥಮ, 1 ತೃತೀಯ ಸ್ಥಾನ ಹಾಗೂ ಕಿರಿಯ ವಿಭಾಗದಲ್ಲಿ 6 ಪ್ರಥಮ ಸ್ಥಾನ, 1 ದ್ವಿತೀಯ ಸ್ಥಾನ ಪಡೆದು ಒಟ್ಟು 16 ಪ್ರಥಮ, 1 ದ್ವಿತೀಯ, 1 ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ.

ಹಿರಿಯ ವಿಭಾಗದಲ್ಲಿ ಕನ್ನಡ ಕಂಠಪಾಠ ಸ್ಪರ್ಧೆಯಲ್ಲಿ 7ನೇ ತರಗತಿಯ ರಮ್ಯ ಬಿ ಪ್ರಥಮ, ಚಿತ್ರಕಲೆಯಲ್ಲಿ 6ನೇ ತರಗತಿಯ ನಿನಾದ್ ಕೈರಂಗಳ ಪ್ರಥಮ, ಕವನ ವಾಚನ ಸ್ಪರ್ಧೆಯಲ್ಲಿ ಧಾತ್ರಿ ಪ್ರಥಮ, ಛದ್ಮವೇಷ ಸ್ಪರ್ಧೆಯಲ್ಲಿ 6ನೇ ತರಗತಿಯ ಮಿಥಾಲಿ ಪ್ರಥಮ, ಭಕ್ತಿಗೀತೆಯಲ್ಲಿ 5ನೇ ತರಗತಿಯ ಅಪ್ರಮೇಯ ಪ್ರಥಮ, ಕಥೆ ಹೇಳುವುದು 7ನೇ ತರಗತಿಯ ವೈಷ್ಣವಿ ಕಾಮತ್ ಪ್ರಥಮ, ಧಾರ್ಮಿಕ ಪಠಣ 7ನೇ ತರಗತಿಯ ಧಾತ್ರಿ ಪ್ರಥಮ, ಆಶುಭಾಷಣ 7ನೇ ತರಗತಿಯ ವೈಷ್ಣವಿ ಕಡ್ಯ ಪ್ರಥಮ, ಲಘುಸಂಗೀತ 6ನೇ ತರಗತಿಯ ಪ್ರಚೇತ್ ರಾಮ್ ಪ್ರಥಮ, ಸಂಸ್ಕೃತ ಕಂಠಪಾಠ 7ನೇ ತರಗತಿಯ ತೃಪ್ತಿ ಪ್ರಥಮ, ಅಭಿನಯ ಗೀತೆ ಸ್ಪರ್ಧೆಯಲ್ಲಿ ವೈಷ್ಣವಿ ವೈ.ಕೆ ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ.

ಕಿರಿಯ ವಿಭಾಗದಲ್ಲಿ ಕನ್ನಡ ಕಂಠಪಾಠ ಸ್ಪರ್ಧೆಯಲ್ಲಿ 4ನೇ ತರಗತಿಯ ಹಿತಾ ಬಿ.ಕೆ ಪ್ರಥಮ, ಚಿತ್ರಕಲೆಯಲ್ಲಿ 3ನೇ ತರಗತಿಯ ನಿಹಾರಿಕ ಪ್ರಥಮ ಸ್ಥಾನ, ಭಕ್ತಿಗೀತೆಯಲ್ಲಿ 4ನೇ ತರಗತಿಯ ಭೂಮಿಕಾ ಪ್ರಥಮ ಸ್ಥಾನ, ಧಾರ್ಮಿಕ ಪಠಣ 4ನೇ ತರಗತಿಯ ಶ್ರೀರಾಮ ಪ್ರಥಮ, ಆಶುಭಾಷಣ ಸ್ಪರ್ಧೆಯಲ್ಲಿ 4ನೇ ತರಗತಿ ಪ್ರದ್ಯೋತ್ ಪ್ರಥಮ, ಮಣ್ಣಿನ ಮಾದರಿ 4ನೇ ತರಗತಿ ಶಾಶ್ವತ್ ಪ್ರಥಮ ಹಾಗೂ ಲಘು ಸಂಗೀತದಲ್ಲಿ 4ನೇ ತರಗತಿಯ ಪ್ರಣವಿ ದ್ವಿತೀಯ ಸ್ಥಾನ ಪಡೆದುಕೊಂಡಿದ್ದಾರೆ.

## ಪ್ರೌಢಶಾಲೆ

**ಹದಿಹರೆಯದ ಸಮಸ್ಯೆಗಳ ಬಗ್ಗೆ ಮಾಹಿತಿ 4.8.23**

ಬಾಲಕಿಯರಿಗೆ ಡಾ। ಸ್ವಾತಿ ಇವರು ಹದಿಹರೆಯದ ಸಮಸ್ಯೆಗಳು ಮತ್ತು ಅದರ ಪರಿಹಾರೋಪಾಯಗಳನ್ನು ತಿಳಿಸಿಕೊಟ್ಟರು. ವೇದಿಕೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಕಾರ್ಯನಿರ್ವಹಿಸಿ ನಿವೃತ್ತರಾಗಿರುವ ಹಾಗೂ ಪ್ರಸ್ತುತ ಯೋಗ ಶಿಕ್ಷಕಿಯಾಗಿರುವ ಶ್ರೀಮತಿ ಸರಸ್ವತಿ ನೆಟ್ಲ ಇವರು ಉಪಸ್ಥಿತರಿದ್ದರು.

**ಕೃಷಿಕಾರ್ಯ 5.082023**

ವಿದ್ಯಾಕೇಂದ್ರದ ಸುಧೆಕಾರಿನ ಗದ್ದೆಯಲ್ಲಿ ಶ್ರೀರಾಮ ಪ್ರೌಢಶಾಲೆ ವಿದ್ಯಾರ್ಥಿಗಳಿಂದ ನೇಜಿ ತೆಗೆಯುವ ಕೆಲಸ ಆರಂಭಗೊಂಡಿತು.

**ವರ್ತುಲ ಕಾರ್ಯಾಗಾರ 5.08.2023**

ಶ್ರೀದೇವಿ ವಿದ್ಯಾಕೇಂದ್ರ ಪುಣಚ, ಇಲ್ಲಿ ಜರಗಿದ ಶ್ರೀರಾಮ ವರ್ತುಲ ಶೈಕ್ಷಣಿಕ ಕಾರ್ಯಾಗಾರದಲ್ಲಿ ಪ್ರೌಢಶಾಲಾ ಶಿಕ್ಷಕರು ಪಾಲ್ಗೊಂಡರು.

**ರಾಮಾಯಣ ಮತ್ತು ಮಹಾಭಾರತ ಕಥಾಮಾಲಿಕೆ**

8, 9ನೇ ತರಗತಿಯ ವಿದ್ಯಾರ್ಥಿಗಳಿಗೆ 7.08.2023ರಂದು ಆರಂಭಿಸಲಾಯಿತು. ರಾಮಾಯಣ, ಮಹಾಭಾರತ ಕಥೆಯನ್ನು ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ರವಿರಾಜ್ ಶ್ರೀಮಾನ್ ಮತ್ತು ಮಹಾಭಾರತ ಕಥೆಯನ್ನು ನಿವೃತ್ತ ಅಧ್ಯಾಪಕಿ, ಯೋಗ ತರಬೇತುದಾರರಾದ ಶ್ರೀಮತಿ ಮೂಕಾಂಬಿಕ ಇವರು ನಡೆಸಿಕೊಟ್ಟರು.

**ಅತಿಥಿಗಳ ಭೇಟಿ 7.8.23**

ಸಂಜೀವಿನಿ ಚಾರಿಟೇಬಲ್ ಟ್ರಸ್ಟ್ ಇದರ ಅಧ್ಯಕ್ಷರಾದ ಶ್ರೀ ಹೂಡಿ ವಿಜಯ ಕುಮಾರ್, ಕುಮಾರಿ ಅನುಷ್ಕಾ, ಕೋಲಾರದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಚಾರಕರಾದ ಶ್ರೀ ಪ್ರಶಾಂತ್ ಪಲ್ಲಮಜಲು ಇವರು ಪ್ರೌಢಶಾಲೆಯ ಸರಸ್ವತಿ ವಂದನೆಯಲ್ಲಿ ಉಪಸ್ಥಿತರಿದ್ದು, ವಿದ್ಯಾಕೇಂದ್ರವನ್ನು ವೀಕ್ಷಣೆ ಮಾಡಿದರು. ಈ ಸಂದರ್ಭದಲ್ಲಿ ಡಾ। ಪ್ರಭಾಕರ್ ಭಟ್ ಕಲ್ಲಡ್ಕ, ಶ್ರೀಮತಿ ಶಾಂಭವಿ, ಶ್ರೀಮತಿ ಲಕ್ಷ್ಮಿ ರಘುರಾಜ್ ಉಪಸ್ಥಿತರಿದ್ದರು.

**ಶಾಲಾ ಮಟ್ಟದ ಜ್ಞಾನ–ವಿಜ್ಞಾನ ಮೇಳ 7.08.2023–8.08.2023**

ಶಾಲಾ ಮಟ್ಟದ ಜ್ಞಾನ–ವಿಜ್ಞಾನ ಪ್ರಯೋಗ, ವಿಜ್ಞಾನ ಪ್ರದರ್ಶನ, ವಿಜ್ಞಾನ ರಸಪ್ರಶ್ನೆ, ವೈದಿಕ ಗಣಿತ ರಸಪ್ರಶ್ನೆ, ಸ್ಪರ್ಧೆಗಳನ್ನು ನಡೆಸಲಾಯಿತು. ತೀರ್ಪುಗಾರರಾಗಿ ಶ್ರೀ ಅಭಿಲಾಷ್ ಶ್ರೀಮಾನ್, ಶ್ರೀ ಬಾಲಕೃಷ್ಣ ಶ್ರೀಮಾನ್, ಅಕ್ಷಿತ ಮಾತಾಜಿ, ರೋಹಿಣಿ ಮಾತಾಜಿ ಸಹಕರಿಸಿದರು. ಹಾಗೂ ವಿಜ್ಞಾನ ಮತ್ತು ಗಣಿತದ ಅಧ್ಯಾಪಕರು ಸ್ಪರ್ಧೆಗಳನ್ನು ನಡೆಸಿಕೊಟ್ಟರು.

**ರಸಪ್ರಶ್ನೆ ಸ್ಪರ್ಧೆ 8.8.2023**

ಕ್ಯಾಂಪ್ಕೋ ಚಾಕಲೇಟ್ ಕಂಪೆನಿ, ಇಲ್ಲಿನ ಸಿಬ್ಬಂದಿ ವರ್ಗದ ಸದಸ್ಯರಾದ ನಿತಿನ್ ಆಂಡ್ರಿಯ ಇವರು ನಡೆಸಿದ ರಸಪ್ರಶ್ನೆ ಸ್ಪರ್ಧೆಯಲ್ಲಿ ಪ್ರಾಪ್ತಿ ಮತ್ತು ಪ್ರಖ್ಯಾತ್ ಉನ್ನತ ಹಂತಕ್ಕೆ ಆಯ್ಕೆಯಾದರು. ಸದಸ್ಯರಾದ ನಿಖಿಲ್ ಮತ್ತು ಮೋಕ್ಷಿತ್ ಉಪಸ್ಥಿತರಿದ್ದರು.

**ಅತಿಥಿಗಳ ಭೇಟಿ 9.8.23**

ಇಎಎಸ್ ವೈ–ಆಯುರ್ವೇದ, ಅಂತರ್ಜಾಲ ಮಾರುಕಟ್ಟೆಯ ಸಂಸ್ಥಾಪಕರು ಡಾ.ಜನಾರ್ದನ ವಿ ಹೆಬ್ಬಾರ್, ಇವರ ಮಾತೃಶ್ರೀ, ನಿವೃತ್ತ ಶಿಕ್ಷಕಿ ಪದ್ಮಾಕ್ಷಮ್ಮ ಹಾಗೂ ಶ್ರೀಮತಿ ಕಾತ್ಯಾಯನಿ ಹೆಬ್ಬಾರ್ ಉಪಸ್ಥಿತರಿದ್ದರು. ವಿದ್ಯಾಕೇಂದ್ರದ ಸಾರ್ವಜನಿಕ ಸಂಪರ್ಕ ಅಧಿಕಾರಿ ಶ್ರೀ ಮನೋಜ್ ಉಳ್ಳಾಲ್ ಉಪಸ್ಥಿತರಿದ್ದರು.

**ಪೋಷಕರ ಸಭೆ 10.8.2023**

10ನೇ ತರಗತಿ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಯ ಕುರಿತು ಪೋಷಕರ ಸಭೆಯು ಮೂರು ಅವಧಿಗಳಲ್ಲಿ ನಡೆಯಿತು. ವಿದ್ಯಾರ್ಥಿಗಳ ಪ್ರಗತಿಯ ಕುರಿತಾಗಿ ಪೋಷಕರ ಸಂವಾದವನ್ನು ಡಾ। ಪ್ರಭಾಕರ್ ಭಟ್ ಇವರು ನಡೆಸಿಕೊಟ್ಟರು. ಶ್ರೀ ವಸಂತ ಮಾಧವ, ಶ್ರೀ ರಮೇಶ್ ಎನ್, ಶ್ರೀಮತಿ ಶಾಂಭವಿ ಉಪಸ್ಥಿತರಿದರು.

**ಈಜು ಸ್ಪರ್ಧೆ 11.8.2023**

ಸಾ.ಶಿಕ್ಷಣ ಇಲಾಖೆ ನಡೆಸಿದ, ಮಂಗಳೂರು ಮಹಾನಗರ ಪಾಲಿಕೆ ಈಜುಕೊಳದಲ್ಲಿ ನಡೆದ ಜಿಲ್ಲಾ ಮಟ್ಟದ ಈಜು ಸ್ಪರ್ಧೆಯಲ್ಲಿ 8ನೇ ತರಗತಿಯ ಅನರ್ಘ್ಯ ಎ ಆರ್.200 ಮೀಟರ್ ಬ್ಯಾಕ್ ಸ್ಟ್ರೋಕ್ ಮತ್ತು 100.ಮೀ ರಿಲೇಯಲ್ಲಿ ಬಳ್ಳಿ ಪದಕ ಹಾಗು 100 ಮೀಟರ್ ಬ್ಯಾಕ್ ಸ್ಟ್ರೋಕ್‌ನಲ್ಲಿ ಕಂಚಿನ ಪದಕ ಪಡೆದಿರುತ್ತಾಳೆ.

**ಸ್ವಾತಂತ್ರ್ಯ ದಿನಾಚರಣೆ 15.08.2023**

ನಿವೃತ್ತ ದೈ.ಶಿ.ಶಿಕ್ಷಕರಾದ ಶ್ರೀ ರಾಧಾಕೃಷ್ಣ ಅಡ್ಯಂತಾಯ ಇವರು ಸ್ವಾತಂತ್ರ್ಯ ಹೋರಾಟಗಾರರ ಆದರ್ಶಗಳನ್ನು ಕಥೆಯ ಮೂಲಕ ತಿಳಿಸಿದರು. ವಿದ್ಯಾಕೇಂದ್ರ ಸಹಸಂಚಾಲಕರಾದ ಶ್ರೀ ರಮೇಶ್ ಎನ್ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಜ್ಞಾನ ವಿಜ್ಞಾನ ಮೇಳ, ಪ್ರತಿಭಾ ಕಾರಂಜಿ ಹಾಗೂ ಕ್ರೀಡಾ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನವನ್ನು ನೀಡಿ ಅಭಿನಂದಿಸಲಾಯಿತು.

**ಪ್ರತಿಭಾ ಕಾರಂಜಿಯ ಸ್ಪರ್ಧೆಗಳು 15.08.2023**

ಪ್ರತಿಭಾಕಾರಂಜಿಯ ಪ್ರಯುಕ್ತ ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲಾಯಿತು.

**ಪರೇಡ್‌ನಲ್ಲಿ ಭಾಗಿ 15.8.2023**

ಬಿ.ಸಿ.ರೋಡಿನ ತಾಲೂಕು ಕಛೇರಿ ಎದುರು ಜರುಗಿದ 77 ನೇ ಸ್ವಾತಂತ್ರ್ಯೋತ್ಸವದ ಪರೇಡ್ ಕಾರ್ಯಕ್ರಮಲ್ಲಿ ಪ್ರೌಢಶಾಲಾ ವಿದ್ಯಾರ್ಥಿಗಳ ಎನ್.ಸಿ.ಸಿ ಘೋಷ್ ತಂಡ ಭಾಗವಹಿಸಿತು.

**ಕಣ್ಣಿನ ತಪಾಸಣೆ 16.8.23**

ನೇತ್ರ ತಜ್ಞರಾದ ಡಾ। ಶಾಂತರಾಜ್, ಡಾ। ವಿಕಾಸ್, ಮತ್ತು ಡಾ। ಶ್ರೀಲತಾ ಭೇಟಿ ನೀಡಿ ವಿದ್ಯಾರ್ಥಿಗಳಗೆ ಕಣ್ಣಿನ ಸಮಸ್ಯೆ ಬಗ್ಗೆ ಮಾಹಿತಿ ನೀಡಿ ಕಣ್ಣಿನ ತಪಾಸಣೆ ಮಾಡಿದರು.

**ಯೋಗಾಸನ ಸ್ಪರ್ಧೆ 18.8.23**

ಸರಕಾರಿ ಪ್ರೌಢಶಾಲೆ ಕಲ್ಲರಕೋಡಿ ಇಲ್ಲಿ ನಡೆದ ಸಾ. ಶಿಕ್ಷಣ ಇಲಾಖೆ ಬಂಟ್ವಾಳ ತಾಲೂಕು ಮಟ್ಟ ಯೋಗಾಸನ ಸ್ಪರ್ಧೆಯಲ್ಲಿ 17ರ ವಯೋಮಾನದ ಬಾಲಕರ ವಿಭಾಗದಲ್ಲಿ ಗುರು ಕುಮಾರ್(10 ಆಜಾದ್) ದ್ವಿತೀಯ ಸ್ಥಾನ, ಭರತ್ (9ನೇ ಚೆನ್ನಮ್ಮ ) ಚತುರ್ಥಸ್ಥಾನ ಹಾಗೂ 17ರ ವಯೋಮಾನದ ಬಾಲಕಿಯರ ವಿಭಾಗದಲ್ಲಿ ಧನ್ಯಶ್ರೀ ( 10 ಆಜಾದ್)ಚತುರ್ಥ ಸ್ಥಾನವನ್ನು ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿರುತಾರೆ. 17ರ ವಯೋಮಾನದ ಬಾಲಕಿಯರ ವಿಭಾಗವು ಸಮಗ್ರ ಪ್ರಶಸ್ತಿಯನ್ನು ಪಡೆದುಕೊಂಡಿರುತ್ತದೆ.

**ಸಂಸ್ಕೃತ ಪ್ರತಿಭಾ ಪುರಸ್ಕಾರ**

ಕಟೀಲುದೇವಿಯ ಸನ್ನಿಧಾನದಲ್ಲಿ 20.08.2023 ರಂದು ನಡೆದ ಸಂಸ್ಕೃತ ಪ್ರತಿಭಾ ಪುರಸ್ಕಾರದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಭಾಗವಹಿಸಿದರು.

**ಖೋಖೋ ಪಂದ್ಯಾಟ** 22.08.23

ಕಲ್ಲಡ್ಕ ವಲಯ ಮಟ್ಟದ ಪ್ರೌಢಶಾಲಾ ಬಾಲಕರ ವಿಭಾಗದ ಖೋಖೋ ಪಂದ್ಯಾಟದಲ್ಲಿ ಶ್ರೀರಾಮ ಪ್ರೌಢಶಾಲೆಯು ದ್ವಿತೀಯ ಸ್ಥಾನವನ್ನು ಪಡೆದು ತಾಲೂಕು ಮಟ್ಟಕ್ಕೆ ಆಯ್ಕೆಯಾಗಿದೆ

**ಸಂಸ್ಕೃತ ಸಪ್ತಾಹ ಕಾರ್ಯಕ್ರಮ** 23.8.2023

“ಸಂಸ್ಕೃತ ಸಪ್ತಾಹದ” ಅಂಗವಾಗಿ ವಿದ್ಯಾರ್ಥಿಗಳಿಂದ ಸಂಸ್ಕೃತ ಸ್ತೋತ್ರ ಗಾಯನ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮವನ್ನು ಶ್ರೀ ಜಯರಾಮ್ ಶ್ರೀಮಾನ್ ನಿರ್ವಹಿಸಿದರು.

**ಚಂದ್ರಯಾನ 3 ಬಗ್ಗೆ ಮಾಹಿತಿ 24.08.23**

ಗೋಪಾಲ್ ಶ್ರೀಮಾನ್ ಭಾರತದ ಸಾಧನೆ ಚಂದ್ರಯಾನ 3 ಇದರ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು.

**ಜಿಲ್ಲಾ ಮಟ್ಟದ ಜ್ಞಾನ ವಿಜ್ಞಾನ ಮೇಳ 26.8.23**

ವಿವೇಕಾನಂದ ಕನ್ನಡ ಮಾಧ್ಯಮ ಶಾಲೆ ತೆಂಕಿಲದಲ್ಲಿ ನಡೆದ ಜಿಲ್ಲಾ ಮಟ್ಟದ ಜ್ಞಾನ ವಿಜ್ಞಾನ ಮೇಳದಲ್ಲಿ ಪ್ರೌಢಶಾಲಾ ವಿಭಾಗವು ವಿಜ್ಞಾನ ಪ್ರದರ್ಶನದಲ್ಲಿ ಬಾಲವರ್ಗದಲ್ಲಿ ‘ಸಂವೇದಕಗಳ ಆಧಾರಿತ ಪ್ರತಿರೂಪ ಮತ್ತು ಸೃಜನಾತ್ಮಕ ಪ್ರತಿರೂಪದಲ್ಲಿ’ – ಪ್ರಥಮ ಸ್ಥಾನ, ‘ವೈದಿಕ ಗಣಿತ ರಸಪ್ರಶ್ನೆ’– ತೃತೀಯ ಸ್ಥಾನ, ‘ಕ್ಲೇ ಮಾಡಲಿಂಗ್’ – ದ್ವಿತೀಯ ಸ್ಥಾನ, ಕಿಶೋರ ವರ್ಗದಲ್ಲಿ ವಿಜ್ಞಾನ ಪ್ರದರ್ಶನದಲ್ಲಿ – ಪ್ರಥಮ ಸ್ಥಾನ, ‘ಸೃಜನಾತ್ಮಕ ಪ್ರತಿರೂಪ’ದಲ್ಲಿ – ಪ್ರಥಮ ಸ್ಥಾನ, ವಿಜ್ಞಾನ ಲೇಖನ ವಾಚನದಲ್ಲಿ – ದ್ವಿತೀಯ ಸ್ಥಾನ, ಗಣಿತ ಪತ್ರವಾಚನದಲ್ಲಿ ದ್ವಿತೀಯ ಸ್ಥಾನ, ಗಣಿತ ಪ್ರದರ್ಶನದಲ್ಲಿ – ಪ್ರಥಮ ಸ್ಥಾನ, ಸಂಸ್ಕೃತಿಜ್ಞಾನ ರಸಪ್ರಶ್ನೆಯಲ್ಲಿ – ತೃತೀಯ ಸ್ಥಾನ, ಆಶುಭಾಷಣದಲ್ಲಿ– ಪ್ರಥಮ ಸ್ಥಾನ ಒಟ್ಟು ಪ್ರಥಮ ಸ್ಥಾನ 6, ದ್ವಿತೀಯ 3, ತೃತೀಯ 3 ಬಹುಮಾನಗಳನ್ನು ಪಡೆದುಕೊಂಡಿದೆ.

**ಕಂಪ್ಯೂಟರ್ ಕಾರ್ಯಾಗಾರ 27.08.2023**

ಪ್ರೌಢಶಾಲಾ ಶಿಕ್ಷಕರಿಗೆ ನಡೆಸಿದ ಕಂಪ್ಯೂಟರ್ ಕಾರ್ಯಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಸರಕಾರಿ ಪ್ರೌಢಶಾಲೆ ಶಂಭೂರಿನ ಗಣಿತ ಶಿಕ್ಷಕರಾದ ಶ್ರೀ ಪ್ರಕಾಶ್ ತರಬೇತಿ ನೀಡಿದರು. ಶ್ರೀ ರಮೇಶ್ ಶ್ರೀಮಾನ್ ಕಾರ್ಯಗಾರದ ಅಗತ್ಯತೆಯನ್ನು ಶಿಕ್ಷಕರಿಗೆ ಮನದಟ್ಟು ಮಾಡಿದರು.

**ಪೋಷಕರ ಸಭೆ 28.08.2023**

8ಮತ್ತು 9ನೇ ತರಗತಿ ಹಿಂದುಳಿದ ವಿದ್ಯಾರ್ಥಿಗಳ ಪೋಷಕರಿಗೆ ಪ್ರತ್ಯೇಕವಾಗಿ ನಡೆಸಿ ಹಿಂದುಳಿದ ವಿದ್ಯಾರ್ಥಿಗಳ ಪೋಷಕರೊಂದಿಗೆ ಸಂವಾದ ನಡೆಸಿದರು. ಹಿರಿಯರು ಉಪಸ್ಥಿತರಿದ್ದರು.

**ಸಂಸ್ಕೃತೋತ್ಸವ ಮತ್ತು ರಕ್ಷಾಬಂಧನ 31.8.23**

ಸಂಸ್ಕೃತೋತ್ಸವದ ಪ್ರಯುಕ್ತ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಯಿತು. ಸಭಾಕಾರ್ಯಕ್ರಮದಲ್ಲಿ ಪ.ಪೂ. ಕಾಲೇಜಿನ ಸಂಸ್ಕೃತ ಉಪನ್ಯಾಸಕರಾದ ಶ್ರೀ ಮಹೇಂದ್ರ ಭಟ್ ಸಂಸ್ಕೃತೋತ್ಸವದ ಬಗ್ಗೆ ಹಾಗೂ ಭೌತಶಾಸ್ತ್ರ ಉಪನ್ಯಾಸಕರು ಶ್ರೀ ಬಾಲಕೃಷ್ಣ ರಕ್ಷಾಬಂಧನದ ಬಗ್ಗೆ ಮಾತನಾಡಿದರು. ವಾಷಿಂಗ್ಟನ್‌ನಲ್ಲಿ ಉದ್ಯೋಗದಲ್ಲಿರುವ ಇಂಜಿನಿಯರಿಂಗ್ ಪದವೀಧರ ಶ್ರೀ ಸುನಿಲ್ ಕೊಟ್ಟಾರಿ, ಶ್ರೀಮತಿ ಪ್ರೀಯಾಂಕ, ಸಹ ಸಂಚಾಲಕರು, ಮುಖ್ಯೋಪಾಧ್ಯಾಯರು ಉಪಸ್ಥಿತರಿದ್ದರು. ಇದೇ ವೇಳೆ ಸ್ವಚ್ಛತಾ ಪ್ರಬಂಧಿಕೆಯರಿಗೆ ಬಾಗೀನ ನೀಡಿ ಗೌರವಿಸಲಾಯಿತು. ಸಂಸ್ಕೃತೋತ್ಸವದ ಅಂಗವಾಗಿ ಏರ್ಪಡಿಸಲಾಗಿದ್ದ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಹಾಗೂ ಸಂಸ್ಕೃತದಲ್ಲಿ ಪೂರ್ತಿ ಅಂಕ ಪಡೆದವರಿಗೆ ಬಹುಮಾನ ನೀಡಲಾಯಿತು. ವಿದ್ಯಾರ್ಥಿಗಳು ಪರಸ್ಪರ ರಕ್ಷೆಕಟ್ಟಿಕೊಂಡು ಸಿಹಿ ಹಂಚಿಕೊಂಡು ಸಂಭ್ರಮಿಸಿದರು.

**ರಾಷ್ಟ್ರೀಯ ಕ್ರೀಡಾ ದಿನ 31.08.2023**

ಹಾಕಿ ಮಾಂತ್ರಿಕ ಮೇಜರ್ ಧ್ಯಾನ್‌ಚಂದ್ ಇವರ ಜನ್ಮ ದಿನಾಚರಣೆಯ ನಿಮಿತ್ತ ರಾಷ್ಟ್ರೀಯ ಕ್ರೀಡಾ ದಿನಾಚರಣೆ ಆಚರಿಸಲಾಯಿತು. ವಿದ್ಯಾಕೇಂದ್ರದ ಘೋಷ್ ಪ್ರಮುಖರಾದ ಶ್ರೀ ಉಮೇಶ್ ಕುಲಕರ್ಣಿ, ಗೋಳಮಜಲು ಮಂಡಲ ಕಾರ್ಯವಾಹಕರಾದ ಶ್ರೀ ಶಿವಕುಮಾರ್ ಕಾರ್ಯಕ್ರಮದ ನಿಮಿತ್ತ ವಿದ್ಯಾರ್ಥಿಗಳಿಗೆ ಸ್ವದೇಶೀ ಆಟಗಳನ್ನು ಆಡಿಸಿದರು.

## ಸೆಕೆಂಡರಿ ಸ್ಕೂಲ್

**ರಾಜ್ಯಮಟ್ಟಕ್ಕೆ ಆಯ್ಕೆ 10.8.23**

ಶ್ರೀರಾಮ ಪ್ರೌಢ ಶಾಲೆಯಲ್ಲಿ ನಡೆದ ವಿದ್ಯಾಭಾರತಿ ಜಿಲ್ಲಾಮಟ್ಟದ ಚದುರಂಗ ಸ್ಪರ್ಧೆಯಲ್ಲಿ 10ನೇ ತರಗತಿಯ ವಾಸವಿ.ಕೆ.ಸಿ ಪ್ರಥಮ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದು, ದಿನಾಂಕ 12.08.2023ರಂದು ನಡೆದ ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ವಾಸವಿ.ಕೆ.ಸಿ ದ್ವಿತೀಯ ಸ್ಥಾನ ಪಡೆದಿರುತ್ತಾರೆ.

**ಕೆಸರು ಗದ್ದೆ ಹಬ್ಬ 12.08.2023**

ದಂಡೆಮಾರು ಸುಧೆಕ್ಕಾರು ಗದ್ದೆಯಲ್ಲಿ ನಡೆದ ಕೆಸರು ಗದ್ದೆ ಕಾರ್ಯಕ್ರಮವನ್ನು ಸಂಚಾಲಕರಾದ ಶ್ರೀ ವಸಂತ ಮಾಧವ ಉದ್ಘಟಿಸಿದರು. ನಂತರ ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧೆ ನಡೆಸಲಾಯಿತು.

**ಸ್ವಾತಂತ್ರ್ಯ ದಿನಾಚರಣೆ 15.08.2023**

ಸ್ವಾತಂತ್ರ್ಯೋತ್ಸವ ಧ್ವಜಾರೋಹಣದ ಬಳಿಕ ವಿದ್ಯಾರ್ಥಿಗಳಿಗೆ ಸ್ವಾತಂತ್ರ್ಯ ಹೋರಾಟಗಾರರ ವಿಡಿಯೋವನ್ನು ತೋರಿಸಲಾಯಿತು.

**ವಿದ್ಯಾಭಾರತಿ ದ.ಕನ್ನಡ ಜಿಲ್ಲಾ ಮತ್ತು ರಾಜ್ಯಮಟ್ಟದ ಶಟಲ್ ಬ್ಯಾಡ್ಮಿಂಟನ್ ಪಂದ್ಯಾಟ 23.8.23**

ಸೆಕೆಂಡರಿ ಸ್ಕೂಲ್‌ನ ಆಶ್ರಯದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಮತ್ತು ರಾಜ್ಯಮಟ್ಟದ ಶಟಲ್ ಬ್ಯಾಡ್ಮಿಂಟನ್ ಪಂದ್ಯಾಟವು ಆಫೀಸರ್ ಕ್ಲಬ್ ಪುತ್ತೂರು ಇಲ್ಲಿ ನಡೆಯಿತು. ಶ್ರೀ ಸಹಜ್ ರೈ ಬಳಜ್ಜ, ಶ್ರೀ ವಸಂತ ಮಾಧವ, ಶ್ರೀ ಕರುಣಾಕರ, ಶ್ರೀ ಗೋಪಾಲ್. ಎಂ, ಶ್ರೀ ತಿರುಮಲೇಶ್ವರ ಪ್ರಶಾಂತ್ ಇವರು ಉಪಸ್ಥಿತರಿದ್ದರು.

**ಜಿಲ್ಲಾ ಮಟ್ಟದ ಗಣಿತ – ವಿಜ್ಞಾನ ಹಾಗೂ ಸಂಸ್ಕೃತಿ ಮಹೋತ್ಸವದಲ್ಲಿ ವಿದ್ಯಾರ್ಥಿಗಳಿಗೆ ಪ್ರಶಸ್ತಿ.**

26.08.2023ರಂದು ವಿವೇಕಾನಂದ ಕನ್ನಡ ಮಾಧ್ಯಮ ತೆಂಕಿಲ ಪುತ್ತೂರು ಇಲ್ಲಿ ನಡೆದ ಜಿಲ್ಲಾ ಮಟ್ಟದ ಗಣಿತ – ವಿಜ್ಞಾನ ಹಾಗೂ ಸಂಸ್ಕೃತಿ ಮಹೋತ್ಸವದಲ್ಲಿ ವಿದ್ಯಾರ್ಥಿಗಳಾದ ವರುಣ್ ಮತ್ತು ಸುಜೆಯ್ ವಿಜ್ಞಾನ ಮಾದರಿಯಲ್ಲಿ ರಾಜ್ಯಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ. ಮನಾಲಿ ದೇವಸ್ಯ ಮತ್ತು ವರ್ಣಿತ ಗಣಿತ ಮಾದರಿಯಲ್ಲಿ ದ್ವಿತೀಯ ಸ್ಥಾನ, ಆಶುಭಾಷಣದಲ್ಲಿ ಶ್ರಾವ್ಯ ದ್ವಿತೀಯ ಸ್ಥಾನ, ವಿಜ್ಞಾನ ರಸಪ್ರಶ್ನೆಯಲ್ಲಿ ತೀರ್ಥ

ಶೆಟ್ಟಿ , ಪ್ರಾಪ್ತಿ, ತೇಜಸ್ವಿ ದ್ವಿತೀಯ ಸ್ಥಾನ, ಸಂಸ್ಕೃತಿ ಜ್ಞಾನ ರಸಪ್ರಶ್ನೆಯಲ್ಲಿ ಭಾರ್ಗವರಾಮ, ಶ್ರುತಿಕ್, ವೆಂಕಟ್ ವೈದ್ಯನಾಥನ್ ದ್ವಿತೀಯ ಸ್ಥಾನ, ವೈದಿಕ ಗಣಿತ ಪತ್ರವಾಚನದಲ್ಲಿ ಸುಮೇಧಾ ತೃತೀಯ ಸ್ಥಾನ ಪಡೆದಿರುತ್ತಾರೆ.

**ರಕ್ಷಾಬಂಧನ ಮತ್ತು ರಾಷ್ಟ್ರೀಯ ಕ್ರೀಡಾ ದಿವಸ ಆಚರಣೆ. 31.08.23**

ದ.ಕ ಜಿಲ್ಲಾ ಖೇಲ್‌ಕೂದ್ ಪ್ರಮುಖ್ ಶ್ರೀ ಕರುಣಾಕರ್ ಕಾರ್ಯಕ್ರಮದ ವಿಶೇಷತೆಯನ್ನು ತಿಳಿಸಿದರು. ವಿದ್ಯಾಕೇಂದ್ರದ ಸಂಚಾಲಕರಾದ ಶ್ರೀ ವಸಂತ ಮಾಧವ, ಉಪಪ್ರಾಂಶುಪಾಲರಾದ ಶ್ರೀ ತಿರುಮಲೇಶ್ವರ ಪ್ರಶಾಂತ್ ಉಪಸ್ಥಿತರಿದ್ದರು

## ಪದವಿ ಪೂರ್ವ

**ಜಿಲ್ಲಾ ಮಟ್ಟದ ಕಬಡ್ಡಿ ಪಂದ್ಯಾಟ 03.08.2023**

ಶಕ್ತಿ ವಿದ್ಯಾಸಂಸ್ಥೆ ಮಂಗಳೂರು ಇಲ್ಲಿ ನಡೆದ ವಿದ್ಯಾಭಾರತಿ ಜಿಲ್ಲಾ ಮಟ್ಟದ ಕಬಡ್ಡಿ ಪಂದ್ಯಾಟದಲ್ಲಿ ಪದವಿ ಪೂರ್ವ ವಿದ್ಯಾಲಯದ ಬಾಲಕಿಯರ ತಂಡ ದ್ವಿತೀಯ ಸ್ಥಾನವನ್ನು ಪಡೆದುಕೊಂಡಿದೆ.

**ಖೋ-ಖೋ ಸ್ಪರ್ಧೆ:**

ಮುಂಡಾಜೆ ವಿದ್ಯಾಸಂಸ್ಥೆ ಮುಂಡಾಜೆಯಲ್ಲಿ ನಡೆದ ವಿದ್ಯಾಭಾರತಿ ಜಿಲ್ಲಾ ಮಟ್ಟದ ಖೋ-ಖೋ ಸ್ಪರ್ಧೆಯಲ್ಲಿ ಹುಡುಗರ ತಂಡ ದ್ವಿತೀಯ ಸ್ಥಾನ ಪಡೆದಿದೆ.

**ಚೆಸ್ ಸ್ಪರ್ಧೆ :**

ಶ್ರೀರಾಮ ವಿದ್ಯಾಸಂಸ್ಥೆ ಪಟ್ಟೂರು ಇಲ್ಲಿ ನಡೆದ ವಿದ್ಯಾಭಾರತಿ ಜಿಲ್ಲಾ ಮಟ್ಟದ ಚೆಸ್ ಪಂದ್ಯಾಟದಲ್ಲಿ ಚೈತ್ರ ಎಂ ಮತ್ತು ಸಮಿತ್ ಎ ಶೆಟ್ಟಿ ಕಂಚಿನ ಪದಕದೊಂದಿಗೆ ಪ್ರಾಂತ ಮಟ್ಟದ ಚೆಸ್ ಪಂದ್ಯಾಟಕ್ಕೆ ಆಯ್ಕೆಯಾಗಿರುತ್ತಾರೆ.

**ನಾಯಕತ್ವ ತರಬೇತಿ 11.08.2023**

ಭರತ ವಿದ್ಯಾರ್ಥಿ ಸಂಘದ ವತಿಯಿಂದ ಪ್ರಸಕ್ತ ಶೈಕ್ಷಣಿಕ ಸಾಲಿನ ವಿದ್ಯಾರ್ಥಿ ಸಂಘ ಮತ್ತು ಇತರ ಸಂಘದ ಪದಾಧಿಕಾರಿಗಳ ನಾಯಕತ್ವ ತರಬೇತಿಯಲ್ಲಿ ಪದವಿ ಕಾಲೇಜಿನ ಪ್ರಾಚಾರ್ಯರಾದ ಶ್ರೀ ಕೃಷ್ಣಪ್ರಸಾದ್ ಮಾತನಾಡಿದರು.

**ಹಿಂದೂ ಸಾಮ್ರಾಜ್ಯ ದಿನ ಆಚರಣೆ 23.8.23**

ಛತ್ರಪತಿ ಶಿವಾಜಿ ಮಹಾರಾಜರ 350ನೇ ಪಟ್ಟಾಭಿಷೇಕದ ಸಲುವಾಗಿ ಹಿಂದೂ ಸಾಮ್ರಾಜ್ಯ ದಿನಾಚರಣೆಯನ್ನು ಆಚರಿಸಲಾಯಿತು. ನಿವೃತ್ತ ದೈ.ಶಿ.ಶಿಕ್ಷಕರಾದ ಶ್ರೀ ರಾಧಾಕೃಷ್ಣ ಅಡ್ಯಂತಾಯ ಮಾತನಾಡಿದರು. ಪ್ರಾಚಾರ್ಯರಾದ ಶ್ರೀ ವಸಂತ ಬಲ್ಲಾಳ್ ಉಪಸ್ಥಿತರಿದ್ದರು.

**ಚಂದ್ರಯಾನ-3ರ ಬಗ್ಗೆ ಮಾಹಿತಿ:** 24.08.2023

ವಿಕ್ರಮ ಲ್ಯಾಂಡರ್ ಚಂದ್ರಯಾನ-3ರ ಬಗ್ಗೆ ಉಪನ್ಯಾಸಕರಾದ ಶ್ರೀ ಬಾಲಕೃಷ್ಣ ಮಾಹಿತಿ ನೀಡಿದರು. ಉಪನ್ಯಾಸಕರಾದ ಶ್ರೀ ದಿನೇಶ್ ಕಾರ್ಯಕ್ರಮ ನಿರ್ವಹಿಸಿದರು.

**ಸ್ವಾಮಿ ದಯಾನಂದ ಸರಸ್ವತಿ 200ನೇ ವರ್ಷಾಚರಣೆ**

ಸ್ವಾಮಿ ದಯಾನಂದ ಸರಸ್ವತಿ ಯವರ 200ನೇ ಜನ್ಮ ಶತಾಬ್ದಿ ಪ್ರಯುಕ್ತ ದಿನಾಂಕ 25.8.2023 ರಂದು ಆಯೋಜಿಸಿದ ಉಪನ್ಯಾಸ ಕಾರ್ಯಕ್ರಮವನ್ನು ಖ್ಯಾತ ವಕೀಲರಾದ ಶ್ರೀ ಪ್ರಸಾದ್ ಕುಮಾರ್ ರೈ ಮಾತನಾಡಿದರು. ಕಾರ್ಯಕ್ರಮದಲ್ಲಿ ಹಿಂದಿ ಉಪನ್ಯಾಸಕಿ ಶ್ರೀಮತಿ ಶೋಭಾ ಉಪಸ್ಥಿತರಿದ್ದರು.

**ಸಂಸ್ಕೃತ ಸಪ್ತಾಹದ ಕಾರ್ಯಕ್ರಮ** 25.8.23

ಭಾರವಿ ಸಂಸ್ಕೃತ ಸಂಘದಿಂದ ಸಂಸ್ಕೃತ ಸಪ್ತಾಹದ ಕಾರ್ಯಕ್ರಮ ನಡೆಸಲಾಯಿತು.

**ಪೋಷಕರ ಸಭೆ 28.08.2023**

ಮೌಲ್ಯಯುತ ಶಿಕ್ಷಣದೊಂದಿಗೆ ವಿದ್ಯಾರ್ಥಿಗಳನ್ನು ಸಂಸ್ಕಾರಯುತರನ್ನಾಗಿಸುವುದು ನಮ್ಮ ಧ್ಯೇಯ ಎಂದು ಪೋಷಕರ ಸಭೆಯಲ್ಲಿ ಡಾ। ಪ್ರಭಾಕರ ಭಟ್ ಕಲ್ಲಡ್ಕ ಇವರು ಮಾರ್ಗದರ್ಶನ ಮಾಡಿದರು. ಪ್ರಾಚಾರ್ಯರಾದ ಶ್ರೀ ವಸಂತ ಬಳ್ಳಾಲ್, ವೇದಿಕೆಯಲ್ಲಿ ವಿದ್ಯಾಕೇಂದ್ರದ ಅಧ್ಯಕ್ಷರಾದ ಶ್ರೀ ನಾರಾಯಣ ಸೋಮಯಾಜಿ, ಆಡಳಿತ ಮಂಡಳಿಯ ಸದಸ್ಯರಾದ ಶ್ರೀ ನಾಗೇಶ್ ಕಲ್ಲಡ್ಕ ಉಪಸ್ಥಿತರಿದ್ದರು.

**ಅಟಲ್ ಟಿಂಕರಿಂಗ್ ಲ್ಯಾಬ್‌ನಲ್ಲಿ ಕಾರ್ಯಾಗಾರ 9.8.23**

ಅಟಲ್ ಟಿಂಕರಿಂಗ್ ಲ್ಯಾಬ್‌ನಲ್ಲಿ ಪ. ಪೂ ಕಾಲೇಜಿನ ವಿಜ್ಞಾನ ಶಿಕ್ಷಕರಿಗೆ ಒಂದು ದಿನದ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಹತ್ತು ಶಿಕ್ಷಕರು ತಮ್ಮ ವಿಷಯಗಳ ಬಗ್ಗೆ ಮಾದರಿಗಳನ್ನು ಸಿದ್ಧಪಡಿಸಿದರು.

**ಅಟಲ್ ಟಿಂಕರಿಂಗ್ ಲ್ಯಾಬ್‌ನಲ್ಲಿ ಕಾರ್ಯಾಗಾರ 31.8.23**

ಅಟಲ್ ಟಿಂಕರಿಂಗ್ ಪ್ರಯೋಗಾಲಯದಲ್ಲಿ ಸಹ್ಯಾದ್ರಿ ಮಾಸ್ಟರ್ ಆಫ್ ಬ್ಯುಸಿನೆಸ್ ಅಡ್ಮಿನಿಸ್ಟ್ರೇಷನ್ ಕಾಲೇಜಿನ ಸಹಯೋಗದೊಂದಿಗೆ ಮಾಹಿತಿ ಕಾರ್ಯಾಗಾರವನ್ನು ಆಯೋಜಿಸಲಾಗಿದೆ. ಸಹ್ಯಾದ್ರಿ ಮಾಸ್ಟರ್ ಆಫ್ ಬಿಸಿನೆಸ್ ಅಡ್ಮಿನಿಸ್ಟ್ರೇಷನ್ ಕಾಲೇಜಿನ ಸಹಾಯಕ ಪ್ರಾಧ್ಯಾಪಕಿ ದಿಶಾ ಶೆಟ್ಟಿ ಮಾಹಿತಿ ಕಾರ್ಯಾಗಾರ ನಡೆಸಿಕೊಟ್ಟರು. ವಿದ್ಯಾರ್ಥಿಗಳಾದ ಅನಿರುದ್ ಮತ್ತು ತುಷಾರ್ ಸಹಕರಿಸಿದರು. ವಿದ್ಯಾಭಾರತಿಯ ಜಿಲ್ಲಾಧ್ಯಕ್ಷರಾದ ಶ್ರೀ ಲೋಕಯ್ಯ ಡಿ, ಪ್ರಾಂಶುಪಾಲರಾದ ಶ್ರೀ ವಸಂತ ಬಲ್ಲಾಳ್, ಪ್ರೌಢಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಗೋಪಾಲ್ ಎಂ. ಉಪಸ್ಥಿತರಿದ್ದರು. ಪ್ರಯೋಗಾಲಯದ ಶ್ರೀಮತಿ ರೋಹಿಣಿ ಕಾರ್ಯಕ್ರಮ ಆಯೋಜಿಸಿದರು.

**ರಾಷ್ಟ್ರೀಯ ಕ್ರೀಡಾ ದಿನಾಚರಣೆ 29.08.2023**

ಭಾರತದ ಖ್ಯಾತ ಹಾಕಿಪಟು ಮೇಜರ್ ಧ್ಯಾನ ಚಂದ್ ರವರ ಹುಟ್ಟುಹಬ್ಬ ಆಗಸ್ಟ್ 29 ರಾಷ್ಟ್ರೀಯ ಕ್ರೀಡಾ ದಿನಾಚರಣೆಯನ್ನಾಗಿ ದೇಶದೆಲ್ಲೆಡೆ ಆಚರಿಸಲಾಗುತ್ತಿದೆ ಆ ಪ್ರಯುಕ್ತ 31.8.2023 ರಂದು ರಾಷ್ಟ್ರೀಯ ಕ್ರೀಡಾ ದಿನಾಚರಣೆಯನ್ನು ಆಚರಿಸಲಾಯಿತು. ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ಕರುಣಾಕರ ಮೇಜರ್ ಧ್ಯಾನಚಂದ್‌ರ ಬಗ್ಗೆ ಮಾತನಾಡಿದರು. ಉಪನ್ಯಾಸಕರಾದ ಶ್ರೀ ಅಶೋಕ್ ಉಪಸ್ಥಿತರಿದ್ದರು.

**ರಕ್ಷಾ ಬಂಧನ ಉತ್ಸವ 31.8.2023**

ವಿದ್ಯಾರ್ಥಿಗಳು ಸಹೋದರತೆಯ ಸಂಕೇತವಾಗಿ ಪರಸ್ಪರ ರಕ್ಷೆ ಕಟ್ಟುವ ಮೂಲಕ ರಕ್ಷಾಬಂಧನ ಉತ್ಸವ ಆಚರಿಸಲಾಯಿತು ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಕನ್ನಡ ಉಪನ್ಯಾಸಕರಾದ ಶ್ರೀ ಅಶೋಕ್ ಮಾತನಾಡಿ ರಕ್ಷಾಬಂಧನದ ಬಗ್ಗೆ ಮಾತನಾಡಿದರು. ದೈಹಿಕ ಶಿಕ್ಷಣ ಉಪನ್ಯಾಸಕರಾದ ಶ್ರೀ ಕರುಣಾಕರ ಉಪಸ್ಥಿತರಿದ್ದರು.

**ಪಾಲಕರ ಸಭೆ 29.8.23**

ಪ್ರಥಮ ವರ್ಷದ ವಿದ್ಯಾರ್ಥಿಗಳ ಪಾಲಕರ ಬೈಠಕ್‌ನಲ್ಲಿ ಶ್ರೀ ಕೃಷ್ಣಪ್ರಸಾದ್, ಹಿರಿಯರಾದ ಡಾ. ಪ್ರಭಾಕರ ಭಟ್ ಮಾರ್ಗದರ್ಶನ ಮಾಡಿದರು. ಶ್ರೀ ಬಿ. ನಾರಾಯಣ ಸೋಮಯಾಜಿ, ಸಂಚಾಲಕರಾದ ಶ್ರೀ ವಸಂತ ಮಾಧವ, ವೇದಿಕೆಯಲ್ಲಿ ಉಪಸ್ಥಿತರಿದ್ದರು.

**ರಸಪ್ರಶ್ನೆ ಸ್ಪರ್ಧೆ 30.08.2023**

ಬಂಟ್ವಾಳ ತಾಲೂಕು ಮಟ್ಟದ ಪ್ರಾಥಮಿಕ ಆರೋಗ್ಯ ಕೇಂದ್ರ ಕಲ್ಲಡ್ಕ-ಬಾಳ್ತಿಲ ಇವರು ಪದವಿ ವಿದ್ಯಾರ್ಥಿಗಳಿಗೆ ಹದಿಹರೆಯದ ಆರೋಗ್ಯ, ಕುಷ್ಠರೋಗ, ಮಾನಸಿಕ ಆರೋಗ್ಯ ಅಥವಾ ವಿವಿಧ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳು ಎಂಬ ವಿಷಯದ ಕುರಿತು ರಸಪ್ರಶ್ನೆ ಸ್ಪರ್ಧೆಯನ್ನು ಏರ್ಪಡಿಸಿದರು.

ಬಂಟ್ವಾಳ ತಾಲೂಕಿನ ಆರೋಗ್ಯ ಅಧಿಕಾರಿ ಡಾ।ಅಶೋಕ್ ಕುಮಾರ್.ರೈ, ಪ್ರಾಥಮಿಕ ಆರೋಗ್ಯ ಕೇಂದ್ರ ಕಲ್ಲಡ್ಕ-ಬಾಳ್ತಿಲದ ವೈದ್ಯಾಧಿಕಾರಿ ರೋಶಿಣಿ ಪೂಂಜ, ಪ್ರಾಥಮಿಕ ಆರೋಗ್ಯ ಕೇಂದ್ರ ಕಲ್ಲಡ್ಕದ ಸುರಕ್ಷಾ ಅಧಿಕಾರಿ ಶ್ರೀಮತಿ ಸರಸ್ವತಿ, ಬಂಟ್ವಾಳದ ಹಿರಿಯ ಆರೋಗ್ಯ ನಿರೀಕ್ಷಣಾ ಅಧಿಕಾರಿ ಶ್ರೀಮತಿ ಕುಸುಮ ಹಾಗೂ ವಾಣಿಜ್ಯ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಸುಕನ್ಯಾ ಮಾತಾಜಿ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸಾಹಿತ್ಯ ಸಂಘದ ನಿರ್ದೇಶಕಿ ಸಂಧ್ಯಾ ಮಾತಾಜಿ ಸ್ವಾಗತಿಸಿ, ವಂದಿಸಿ, ನಿರೂಪಿಸಿದರು.

**ರಕ್ಷಾಬಂಧನ, ಸಂಸ್ಕೃತ ದಿನ ಹಾಗೂ ಓಣಂ ಆಚರಣೆ 30.08.2023**

ರಕ್ಷಾ ಬಂಧನ, ಸಂಸ್ಕೃತ ದಿನ ಹಾಗೂ ಓಣಂ ಕಾರ್ಯಕ್ರಮಗಳನ್ನು ಆಚರಿಸಲಾಯಿತು. ಓಣಂ ಹಬ್ಬದ ಪ್ರಯುಕ್ತ ವಿದ್ಯಾರ್ಥಿಗಳಿಗೆ ಪೂಕ್ಕಳಂ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಹಿರಿಯರನ್ನು ಆರತಿ ಬೆಳಗಿ, ಶಾಲು ಹೊದಿಸಿ, ರಕ್ಷೆ ಕಟ್ಟಿ ಗೌರವಿಸಲಾಯಿತು. ಡಾ. ಪ್ರಭಾಕರ ಭಟ್ ಅಧ್ಯಕ್ಷತೆ ವಹಿಸಿದ್ದರು. ಶ್ರೀರಾಮ ಪದವಿಪೂರ್ವ ಕಾಲೇಜಿನ ಮಾಜಿ ಪ್ರಾಂಶುಪಾಲರಾದ ಶ್ರೀ ಮಹೇಶ್ವರ ಭಟ್ ಬರೆಪ್ಪಾಡಿ ಇವರು ರಕ್ಷಾ ಬಂಧನ, ಸಂಸ್ಕೃತ ದಿನ ಹಾಗೂ ಓಣಂ ಆಚರಣೆಯ ಮಹತ್ವವನ್ನು ತಿಳಿಸಿದರು.



**ಚದುರಂಗ ಸ್ಪರ್ಧೆಯಲ್ಲಿ ಭಾಗಿ 4.08.2023**

ಶಿಕ್ಷಣ ಇಲಾಖೆ ವತಿಯಿಂದ ನಡೆದ ಚದುರಂಗ ಸ್ಪರ್ಧೆಯಲ್ಲಿ 17 ರ ವಯೋಮಾನದ ಬಾಲಕರ ವಿಭಾಗದಲ್ಲಿ ಆಕಾಶ್ ಪ್ರಥಮ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆ. 14 ವಯೋಮಾನದ ಬಾಲಕಿಯರ ವಿಭಾಗದಲ್ಲಿ ಅಂಕಿಯ 3ನೇ ಸ್ಥಾನವನ್ನು ಪಡೆದುಕೊಂಡಿರುತ್ತಾಳೆ.



**ಜಿಲ್ಲಾ ಮಟ್ಟದ ಚದುರಂಗ ಸ್ಪರ್ಧೆ 10.8.23**

ವಿದ್ಯಾಭಾರತಿ ಕರ್ನಾಟಕ ದಕ್ಷಿಣ ಕನ್ನಡ ಜಿಲ್ಲಾ ಮಟ್ಟದ ಚದುರಂಗ ಸ್ಪರ್ಧೆ ವಿವೇಕಾನಂದ ವಿದ್ಯಾಸಂಸ್ಥೆ ಪಟ್ಟೂರಿನಲ್ಲಿ ನಡೆದಿದ್ದು 9ನೇ ಭಾಸ್ಕರ ತರಗತಿಯ ಅನನ್ಯ ಐದನೆಯ ಸ್ಥಾನದೊಂದಿಗೆ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿರುತ್ತಾಳೆ.




**ಯೋಗ ತರಬೇತಿ ಕಾರ್ಯಕ್ರಮ 27.07.2023**

ವಿದ್ಯಾಭಾರತಿಯ ಯೋಜನೆಯಂತೆ ಒಂದು ದಿನ ಯೋಗ ಶಿಬಿರವನ್ನು ಮಧುಕರ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಶ್ರೀ ಸಂಜಯ್ ಮತ್ತು ಶ್ರೀ ಚಂದ್ರಶೇಖರ್ ಇವರು ತರಬೇತಿಯನ್ನು ನಡೆಸಿಕೊಟ್ಟರು. ತರಬೇತಿಯಲ್ಲಿ ಎಲ್ಲಾ ಶ್ರೀಮಾನ್ ಮಾತಾಜಿಗಳು ಉಪಸ್ಥಿತರಿದ್ದರು.



**ಜಿಲ್ಲಾಮಟ್ಟದ ಕರಾಟೆ ಸ್ಪರ್ಧೆಯಲ್ಲಿ ಭಾಗಿ 26.8.23**

17ರ ವಯೋಮಾನದ ಬಾಲಕರ 56 ಕೆ.ಜಿ ವಿಭಾಗದಲ್ಲಿ ನಿಖಿತ್ (10ಭ)–ದ್ವಿ, ಬಾಲಕಿಯರ 60ಕೆ.ಜಿನಲ್ಲಿ ವಿಭಾಗದಲ್ಲಿ ಪಲ್ಲವಿ (9ಚೆ) ದ್ವಿತೀಯ, 50ಕೆ.ಜಿಯಲ್ಲಿ ನಯನಾ ಜಾರ್ಜ್ (10ಚ್ಯ) ದ್ವಿತೀಯ, 40ಕೆ.ಜಿಯಲ್ಲಿ ಉಮಾಭಾರತಿ (9ಒ) ದ್ವಿತೀಯ ಸ್ಥಾನವನ್ನು ಪಡೆದು ಪ್ರಾಂತ ಮಟ್ಟಕ್ಕೆ ಆಯ್ಕೆ ಆಗಿರುತಾರೆ.



**ತಾಲೂಕು ಮಟ್ಟದ ಯೋಗಾಸನ ಸ್ಪರ್ಧೆ 17.8.23**

ಸರಕಾರಿ ಪ್ರೌಢಶಾಲೆ ಕಲ್ಲರಕೋಡಿ ಇಲ್ಲಿ ನಡೆದ ಸಾರ್ವಜನಿಕ ಶಿಕ್ಷಣ ಇಲಾಖೆಯ ತಾಲೂಕು ಮಟ್ಟದ ಯೋಗಾಸನ ಸ್ಪರ್ಧೆಯಲ್ಲಿ ಎಂಟನೇ ತರಗತಿಯ ತೀರ್ಥೇಶ್(ನಚಿಕೇತ) ಹಾಗೂ ಬ್ರಾಹ್ಮಿ (ಏಕಲವ್ಯ) ಪ್ರಥಮ ಸ್ಥಾನದೊಂದಿಗೆ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ.



**ಯಕ್ಷಗಾನ ತರಬೇತಿ ಉದ್ಘಾಟನೆ 8.8.2023**

ಯಕ್ಷಧ್ರುವ ಪಟ್ಲ ಫೌಂಡೇಶನ್ (ರಿ) ಮಂಗಳೂರು ಇದರ ಸ್ಥಾಪಕರು ಮತ್ತು ಪ್ರಸಿದ್ಧ ಭಾಗವತರು ಶ್ರೀ ಸತೀಶ್ ಶೆಟ್ಟಿ ಪಟ್ಲ ಇವರು ಉದ್ಘಾಟಿಸಿದರು. ವೇದಿಕೆಯಲ್ಲಿ ಯಕ್ಷಗಾನ ಗುರುಗಳಾದ ಮೋಹನ್‌ಅಮ್ಮುಂಜೆ, ಶ್ರೀ ರಮೇಶ್‌ಎನ್, ಮುಖ್ಯೋಪಾಧ್ಯಾಯರು ಆಡಳಿತ ಅಧಿಕಾರಿ ಉಪಸ್ಥಿತರಿದ್ದರು.

## ಪದವಿಪೂರ್ವ



**ಕೆಸರು ಗದ್ದೆ ಸ್ಪರ್ಧೆ 1.8.2023**

ಭಾರ್ಗವ ಕ್ರೀಡಾ ಸಂಘದ ವತಿಯಿಂದ ದಂಡೆಮಾರು ಗದ್ದೆಯಲ್ಲಿ ನಡೆದ ಕೆಸರುಗದ್ದೆ ಕ್ರೀಡಾಕೂಟವನ್ನು ಡಾ। ಪ್ರಭಾಕರ್ ಭಟ್ ಕಲ್ಲಡ್ಕ ಅಮೃತವನ್ನು ಕೆಸರುಗದ್ದೆಗೆ ಧಾರೆ ಎರೆದು ಉದ್ಘಾಟಿಸಿದರು. ಡಾ. ಕಮಲಾ ಪ್ರ. ಭಟ್, ಶ್ರೀ ನಾಗೇಶ್ ಕಲ್ಲಡ್ಕ, ಪ್ರಾಚಾರ್ಯ ಶ್ರೀ ವಸಂತ ಬಲ್ಲಾಳ್ ಉಪಸ್ಥಿತರಿದ್ದರು.



**ನೇಜಿ ನೆಡುವ ಕಾರ್ಯಕ್ರಮ 09.08.2023**

ವಿದ್ಯಾಕೇಂದ್ರಕ್ಕೆ ಸಂಬಂಧಿಸಿದ ಸುದೇಕಾರ್‌ನ ಕೃಷಿಭೂಮಿಯಲ್ಲಿ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳು ನೇಜಿ ನೆಡುವ ಕಾರ್ಯದಲ್ಲಿ ತೊಡಗಿಕೊಂಡರು. ಸುದೇಕಾರ್‌ನ ಶ್ರೀ ಜಯರಾಮ ಇವರಿಗೆ ಮಾರ್ಗದರ್ಶನ ಮಾಡಿದರು.




**77ನೇ ಸ್ವಾತಂತ್ರ್ಯ ದಿನಾಚರಣೆ:**

ಶ್ರೀ ಪಾಂಚಜನ್ಯ ಕ್ರಿಯೇಶನ್ಸ್ ಬಂಟ್ವಾಳ ನಿರ್ಮಾಣದ ದೇಶಭಕ್ತಿ ಗೀತೆ ಜಯತು ಭಾರತಾಂಬೆ ಇದರ ಆಡಿಯೋ ವಿಡಿಯೋವನ್ನು ಸಂಚಾಲಕರು ಶ್ರೀ ವಸಂತ ಮಾಧವ ಬಿಡುಗಡೆ ಮಾಡಿದರು. ಶ್ರೀ ಸುಮಂತ್ ಆಳ್ವಾ ದಿನದ ಬಗ್ಗೆ ಮಾತನಾಡಿದರು. ಶ್ರೀ ನಾಗೇಶ್ ಕಲ್ಲಡ್ಕ, ಪಾಂಚಜನ್ಯ ಕ್ರಿಯೇಶನ್ಸ್ ನ ನಿರ್ಮಾಪಕ ಪ್ರಾಚಾರ್ಯರು ಉಪಸ್ಥಿತರಿದ್ದರು.

## ಪದವಿ



**ಹಿರಿಯರೊಂದಿಗೆ ರಕ್ಷಾಬಂಧನ ಕಾರ್ಯಕ್ರಮ**

ಓಣಂ, ರಕ್ಷಾಬಂಧನ ಹಾಗೂ ಸಂಸ್ಕೃತ ದಿನವನ್ನು ಆಚರಿಸಲಾಯಿತು. ಓಣಂ ಹಬ್ಬದ ನಿಮಿತ್ತ ವಿದ್ಯಾರ್ಥಿಗಳಿಗೆ ಪೂಕಳಂ ಸ್ಪರ್ಧೆ ನಡೆಸಲಾಗಿತ್ತು. ಹಾಗೂ ಕೇರಳ ಶೈಲಿಯ ವಸಗಳನ್ನು ಧರಿಸಿ ಹಿರಿಯರೊಂದಿಗೆ ವಿದ್ಯಾರ್ಥಿಗಳು ಪರಸ್ಪರ ರಕ್ಷೆ ಕಟ್ಟಿ ಹಬ್ಬ ಆಚರಿಸಿದರು.



**ಹಿರಿಯ ವಿದ್ಯಾರ್ಥಿಗಳಿಗೆ ಕೆಸರು ಗದ್ದೆ ಕ್ರೀಡಾಕೂಟ**

ಪಾಂಚಜನ್ಯ ಹಿರಿಯ ವಿದ್ಯಾರ್ಥಿ ಸಂಘ (ರಿ)ದ ವತಿಯಿಂದ ಹಿರಿಯ ವಿದ್ಯಾರ್ಥಿಗಳಿಗೆ ಕೆಸರು ಗದ್ದೆ ಕ್ರೀಡಾಕೂಟ 13.08.23ರಂದು ದಂಡೆಮಾರ್ ಗದ್ದೆಯಲ್ಲಿ ನಡೆಯಿತು. ಡಾ। ಪ್ರಭಾಕರ್ ಭಟ್ ಕಲ್ಲಡ್ಕ ಉದ್ಘಾಟಿಸಿದರು. ಸಂಘದ ಅಧ್ಯಕ್ಷ ಶ್ರೀ ರಾಜೇಶ್ ನರಿಂಗಾನ, ಕಾರ್ಯದರ್ಶಿ ಶ್ರೀ ಶಿವಪ್ರಸಾದ್ ಸುದೇಕಾರ್ ಉಪಸ್ಥಿತರಿದ್ದರು.




**ಮಾಹಿತಿ ಕಾರ್ಯಾಗಾರ 28.08.23**

ದ್ವಿತೀಯ ಮತ್ತು ತೃತೀಯ ವರ್ಷದ ವಾಣಿಜ್ಯ ಹಾಗೂ ಗಣಕ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗೆ Financial Planning basics for student ಎಂಬ ವಿಷಯದ ಕುರಿತು ವೆಬಿನಾರ್ ನಡೆಯಿತು. ಸಂಪನ್ಮೂಲ ವ್ಯಕ್ತಿಯಾಗಿ ಕು. ಮನಿಷಾ ಚೌಧುರಿ ಇವರು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು.

## ಅಂತಿಮ ಪದವಿ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ 7ದಿವಸಗಳ ಭಾರತ ದರ್ಶನ ಶೈಕ್ಷಣಿಕ ಪ್ರವಾಸ





ಶ್ರೀರಾಮ ಪದವಿ ವಿದ್ಯಾಲಯ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಪ್ರತೀ ವರ್ಷದಂತೆ ಈ ಶೈಕ್ಷಣಿಕ ವರ್ಷದಲ್ಲಿ ಭಾರತ ದರ್ಶನ ಎಂಬ ವಿಷಯದ ಆಧಾರದಲ್ಲಿ 21.08.2023 ರಿಂದ 29.08.2023 ರ ತನಕ ಪ್ರವಾಸ ಕೈಗೊಳ್ಳಲಾಯಿತು. ಒಟ್ಟು 17 ವಿದ್ಯಾರ್ಥಿಗಳು (11 ಹುಡುಗರು 6 ಹುಡುಗಿಯರು) ಭಾಗವಹಿಸಿದ್ದರು. ಉಪನ್ಯಾಸಕರಾದ ಹರ್ಷಿತ್ ಪ್ರವಾಸದ ಜವಾಬ್ದಾರಿ ವಹಿಸಿದ್ದರು. ಇಂಡಿಯಾ ಗೇಟ್, ಕರ್ತವ್ಯ ಪಥ, ವಾರ್ ಮೆಮೋರಿಯಲ್ ಸೆಂಟ್ರಲ್ ವಿಸ್ತ, ರಾಷ್ಟ್ರಪತಿ ಭವನ, ಲೋಟಸ್ ಮಹಲ್ ಹಾಗೂ ಅಕ್ಷರಧಾಮ ಜಮ್ಮುವಿನ ಕಂಡೋಲ ವೈಷ್ಣೋದೇವಿ ಮಂದಿರ, ತಿರುಪತಿ ಬಾಲಾಜಿ ಮಂದಿರ ಹಾಗೂ ಉದ್ಯಾನವನ, ಅಮೃತಸರದಲ್ಲಿ ವಿವಿಧ ಸ್ಥಳಗಳನ್ನು ಸಂದರ್ಶಿಸಲಾಯಿತು. ಜಲಿಯನ್ ವಾಲಾಬಾಗ್, ಸ್ವರ್ಣ ಮಂದಿರ ಹಾಗೂ ಭಾರತ ಮತ್ತು ಪಾಕಿಸ್ತಾನದ ಗಡಿ ಪ್ರದೇಶ ವಾಘಾ ಬಾರ್ಡರ್‌ಗೆ ಭೇಟಿ ನೀಡಲಾಯಿತು.





ಶುಭಕೋರುವ :

**ಶ್ರೀರಾಮ ಸೌಹಾರ್ದ ಸಹಕಾರಿ ನಿಯಮಿತ**

ಪ್ರಧಾನ ಕಚೇರಿ: ಹನುಮಾನ್ ನಗರ ಕಲ್ಲಡ್ಕ ಬಂಟ್ವಾಳ ತಾಲೂಕು 574222 ದೂ: 08255 275173, 275373

ಶಾಖೆ : ಶ್ರೀರಾಮ ವಾಣಿಜ್ಯ ಸಂಕೀರ್ಣ ರಾಮನಗರ ಕಲ್ಲಡ್ಕ

ಕಲ್ಲಡ್ಕ ಶ್ರೀರಾಮ ವಾಣಿಜ್ಯ ಸಂಕೀರ್ಣದ ರಾಮ ನಗರ ಶಾಖೆಯಲ್ಲಿ E-Stamping ಠಸೆ ಕಾಗದ ಸೌಲಭ್ಯವಿದೆ

ಸಾಲ ಸೌಲಭ್ಯಗಳು

ಚಿನ್ನಾಭರಣ ಸಾಲ – 10.5%
ಜಾಮೀನು ಸಾಲ – 16%
ಅಡವು ಸಾಲ – 13%
ವಾಹನ ಸಾಲ – 11.5%
ಗೃಹ ನಿರ್ಮಾಣ ಸಾಲ – 11%

ಠೇವಣಿ ಮೇಲೆ ಆಕರ್ಷಕ ಬಡ್ಡಿ ದರಗಳು

91ದಿನಗಳವರೆಗೆ – 7%
92ರಿಂದ 181 ದಿನಗಳು – 7.5%
182 ರಿಂದ 364 ದಿನಗಳು – 8.5%
1 ವರ್ಷ ಮತ್ತು ಮೇಲ್ಪಟ್ಟು – 9%

ಸೌಲಭ್ಯ

ಆವರ್ತನ ಠೇವಣಿ (R.D)
ಸಂಚಯ ಠೇವಣಿ (S.D)
ನಿರಂತರ ಠೇವಣಿ (ಪಿಗ್ಮಿ)

ಹಿರಿಯ ನಾಗರಿಕರಿಗೆ ಮಾಜಿ ಯೋಧರಿಗೆ ಮತ್ತು ವಿಧವೆಯರಿಗೆ 0.5% ಬಡ್ಡಿ ಹೆಚ್ಚಿಗೆ ನೀಡಲಾಗುವುದು.



Postal Regn No. PTR/136/2022-24 Licensed to Post without pre-payment License No: SK/WPP/PTR/117/2022-24

ಸರಯೂ

Vol. : 10 Issue :4 Rs. 10/-

KARKAN/2014/62363
Posted at Kalladka P.O. on 10th and 15th of Every month

SRI RAMA VIDYAKENDRA TRUST (R.) Hanuman Nagar, Kalladka, Bantwal Tq., Dakshina Kannada, Karnataka 574 222
Website : www.shriramakalladka.in / www.srvk.org E-mail : info@srvk.org

BOOK POST

ಸವಿಧೇ,

Sarayu Kannada Monthly Edited and Published and Printed by B. Narayana Somayaji on behalf of Sri Rama Vidyakendra Trust, Hanuman Nagara, Kalladka, Bantwal Tq, Dakshina Kannada - 574 222. Phone : 9449728763 Printed at Digantha Mudrana Ltd. Magaluru 575008, Bantwal Tq., Dakshina Kannada, Karnataka. Registration No. : KARKAN/2014/62363